info@buntsanghablr.com
buntsanghabangaloare@yahoo.in

# ಸ್ನೇಹ ಚಿಂತನೆ

ಮಾಸ ಪತ್ರಿಕೆ

ಮಾರ್ಚ್ 2026
ಸಂಪುಟ 22 ಸಂಚಿಕೆ 03

ಸಂಚಿಕೆ ಬೆಲೆ ರೂ. 1/-



ಮಹಿಳಾ ವಿಭಾಗ-ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ




ಯಕ್ಷಗಾನ ಮತ್ತು ರಂಗತರಬೇತಿ ಸಮಿತಿ-ಸುದರ್ಶನ ವಿಜಯ ಹಾಗೂ ಮೀನಾಕ್ಷಿ ಕಲ್ಯಾಣ ಯಕ್ಷಗಾನ ಮತ್ತು ಪುಣ್ಯಕೋಟಿ ನಾಟಕ



ಆರ್.ಎನ್.ಎಸ್. ಯುನಿಟ್ ಭಾರತೀಯ ಸ್ಕೌಟ್ಸ್ ಮತ್ತು ಗೈಡ್ಸ್-ಸಂಸ್ಥಾಪಕರ ದಿನಾಚರಣೆ




ಬಂಟರ ಸಂಘ ಆರ್.ಎನ್.ಎಸ್. ವಿದ್ಯಾನಿಕೇತನ-II ಪ್ರಿ ಪ್ರೈಮರಿ ಗ್ರಾಜ್ಯುಯೇಷನ್ ಡೇ

**ಬಂಟರ ಸಮಾಜ ಮತ್ತು ಹೋಟೆಲ್ ಉದ್ಯಮ – ಪರಿಶ್ರಮದ ಹಾದಿ ಇಂದಿನ ಸಂಕಷ್ಟ**

ಬಂಟರ ಸಂಘ ಬೆಂಗಳೂರು
BUNTS' SANGHA BANGALORE
# 324, Bunts' Sangha Complex, Chord Road,
Vijayanagar, Bengaluru - 560040.
P : 080-23399323 / 23399636 | E : info@buntsanghablr.com

DURGAPARAMESHWARI CHITS

# DURGAPARAMESHWARI CHITS PVT. LTD.

(Govt of Karnataka Approved Chit Company)

Regd. Office: No. 228/B 2nd Floor, 55th Cross, 3rd Block, Rajajinagar, (Near Ramamandira), Bengaluru, - 560010

Email : info@durgaparameshwarichits.in

**MB UMESH SHETTY**
Managing Director
Mobile : 9845025921 | Website: durgaparameshwarichits.in

WEBSITE



LOCATION

Chit Fund is the oldest indigenous financial Institution in India. The term CHIT FUND is known as chit, Chittie or Kuri in different parts of the country. But its operation is same throughout the country. Chit fund is a convenient financial instrument which serves twin purposes of savings and Borrowings by a subscriber. The financial institution, ensuring safest investment, subjecting itself to the control of central and state statutes, which empowers the common man is none other than **DURGAPARAMESHWARI CHITS PVT. LTD.**

## OUR POPULAR CHITS DESIGNED ACCORDING TO YOUR NEED AND CONVENIENCE

| SL.NO. | Monthly Instalment | Period | Chit Amount | SL.NO. | Monthly Instalment | Period | Chit Amount |
|---|---|---|---|---|---|---|---|
| 1 | 10,000 | 30 | 3,00,000 | 7 | 75,000 | 40 | 30,00,000 |
| 2 | 20000 | 25 | 5,00,000 | 8 | 1,00,000 | 40 | 40,00,000 |
| 3 | 25000 | 40 | 10,00,000 | 9 | 1,25,000 | 40 | 50,00,000 |
| 4 | 50,000 | 30 | 15,00,000 | 10 | 2,00,000 | 25 | 50,00,000 |
| 5 | 50,000 | 40 | 20,00,000 | 11 | 2,50,000 | 40 | 1,00,00,000 |
| 6 | 70,000 | 30 | 21,00,000 | 12 | 5,00,000 | 40 | 2,00,00,000 |

## The Best Reliable Financial Investment Option

**Call : 080-35831843 | 9535544772 | 9845025921 | 9513005556 | 9513005557**



SCAN FOR PAYMENT



ADVT.

ಬಂಟರ ಸಂಘ ಬೆಂಗಳೂರು

# ಸ್ನೇಹ ಚಿಂತನೆ

VOL - 22
MARCH - 2026
ISSUE - 03

Monthly Magazine Published by
**BUNTS' SANGHA BANGALORE**

**ಸಾಹಿತ್ಯ ಪ್ರಕಾಶನ ಸಮಿತಿ**
ಚೇರ್‌ಪರ್ಸನ್ ಮತ್ತು ಗೌರವ ಸಂಪಾದಕರು:
ಶ್ರೀ ರವೀಂದ್ರ ಶೆಟ್ಟಿ ಹಟ್ಟಿಯಂಗಡಿ

**ಸಹ ಸಂಪಾದಕರು:**
ಶ್ರೀ ದೀಪಕ್ ಜೆ. ಶೆಟ್ಟಿ

**ಗೌರವ ಸಲಹೆಗಾರರು:**
ಶ್ರೀ ಎಂ. ಮುರಲೀಧರ ಹೆಗ್ಡೆ
ಶ್ರೀ ಬಾಲಕೃಷ್ಣ ಶೆಟ್ಟಿ (ಎಬಿ ಶೆಟ್ಟಿ)
ಡಾ. ದೀಪಕ್ ಶೆಟ್ಟಿ

**ಸಂಪಾದಕೀಯ ಮಂಡಳಿ**
ಶ್ರೀಮತಿ ನಿರ್ಮಲ ಸಿ. ರೈ
ಶ್ರೀ ಪ್ರಸಾದ್ ಶೆಟ್ಟಿ ಸೀತಾನದಿ
ಶ್ರೀಮತಿ ಸ್ಮಿತಾ ಬಲ್ಲಾಳ್
ಶ್ರೀ ಸತೀಶ್ ಶೆಟ್ಟಿ ವಕ್ವಾಡಿ
ಶ್ರೀ ಸಂದೀಪ್ ಹೆಗ್ಗದ್ದೆ
ಶ್ರೀಮತಿ ಶ್ಯಾಮಲ ಶೆಟ್ಟಿ

**ಪತ್ರಿಕಾ ಸಲಹಾ ವಿಭಾಗ:**
ಸಮಾಜ ಸೇವೆ ವಿಭಾಗ: ಶ್ರೀ ಜಯರಾಮ ಶೆಟ್ಟಿ ನೂಜಾಡಿ
ಕಾನೂನು ಸಲಹೆಗಾರರು: ಶ್ರೀಮತಿ ಸುಪ್ರೀತಾ ಕೆ. ಶೆಟ್ಟಿ
ಆರೋಗ್ಯ ಮಾಹಿತಿ ವಿಭಾಗ: ಡಾ. ಶಾಲ್ಮಲೀ ಸುರೇಶ್
ಮನೋರಂಜನಾ ವಿಭಾಗ: ಶ್ರೀಮತಿ ರೇವತಿ ಶೆಟ್ಟಿ
ಶೈಕ್ಷಣಿಕ ವಿಭಾಗ: ಶ್ರೀಮತಿ ನಂದಿನಿ ನಾಗರಾಜ್ ಶೆಟ್ಟಿ
ಕ್ರೀಡಾ ವಿಭಾಗ: ಶ್ರೀ ನವೀನ್ ಶೆಟ್ಟಿ

**ಪೋಷಕ ಸದಸ್ಯರು:**
ಶ್ರೀಮತಿ ಮನೋರಮ ಚೌಟ
ಶ್ರೀಮತಿ ವೇದ ಎಸ್. ಶೆಟ್ಟಿ
ಶ್ರೀ ಬಿ. ಕುಸುಮಾಕರ ಶೆಟ್ಟಿ
ಶ್ರೀ ಆರ್.ಎಸ್. ಶೆಟ್ಟಿ
ಶ್ರೀಮತಿ ವಸಂತಿ ಪಿ. ಶೆಟ್ಟಿ
ಶ್ರೀ ಪ್ರಕಾಶ್ ಶೆಟ್ಟಿ
ಶ್ರೀ ಎ. ಜೆ. ಶೆಟ್ಟಿ
ಶ್ರೀಮತಿ ಗೀತ ಭಗವಾನ್‌ದಾಸ್ ರೈ
ಶ್ರೀ ಶ್ರೀನಿವಾಸ ಸೂಡ

**ಪ್ರಕಾಶಕರು:**
ಶ್ರೀ ವಿಜಯ್ ಜೆ. ಶೆಟ್ಟಿ ಹಾಲಾಡಿ

## ಒಳ ಪುಟಗಳಲ್ಲಿ.....

| | ಪುಟ |
|---|---|
| ಸಂಪಾದಕೀಯ | 2 |
| ಅಧ್ಯಕ್ಷರ ಮಾತು | 3 |
| ಗೌರವ ಕಾರ್ಯದರ್ಶಿಯವರ ವರದಿ | 4 |
| ಯಕ್ಷಗಾನ ಮತ್ತು ರಂಗತರಬೇತಿ ಸಮಿತಿ | 5 |
| ಬಂಟರ ಸಂಘ ಬೆಂಗಳೂರು–ಮಹಿಳಾ ವಿಭಾಗ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ | 6 |
| ಬಂಟರ ಸಂಘ ಬೆಂಗಳೂರು ವೈದ್ಯಕೀಯ ಮತ್ತು ವಿಮಾ ಸಮಿತಿ – 2024–26 | 8 |
| ಬಂಟರ ಸಂಘ ಆರ್.ಎಸ್.ಎಸ್. ವಿದ್ಯಾನಿಕೇತನ–I – ಸ್ಕೌಟ್ಸ್ ಮತ್ತು ಗೈಡ್ಸ್ ಸಂಸ್ಥಾಪಕರ ದಿನ | 9 |
| Bunts' Sangha RNS Vidyaniketan-II Graduation Day | 10 |
| ಶ್ರೀ ವರಸಿದ್ಧಿ ವಿನಾಯಕ ಪ್ರಾರ್ಥನಾ ಮಂದಿರ ಸಮಿತಿ | 11 |
| ಬಂಟರ ಸಂಘ ಬೆಂಗಳೂರು ವಿದ್ಯಾರ್ಥಿ ವೇತನ ಮತ್ತು ಪ್ರಶಸ್ತಿ ಸಮಿತಿ 2024–26 | 12 |
| 'ಸಂಕಲ್ಪ' "ಶಿಕ್ಷಣದಿಂದ ಸಂಪನ್ನತೆ...... ಇದೇ ನಮ್ಮ ಸಂಕಲ್ಪ" | 13 |
| ಪ್ರತಿಭಾನ್ವಿತ ವಿದ್ಯಾರ್ಥಿಗಳಿಗಾಗಿ ಉಚಿತ ಪದವಿಪೂರ್ವ ವಿದ್ಯಾಭ್ಯಾಸ ಯೋಜನೆಗೆ ಅರ್ಜಿ | 15 |
| ಸದಸ್ಯತ್ವ ಮತ್ತು ವೆಬ್‌ಸೈಟ್ ಸಮಿತಿ | 17 |
| ಬಂಟ ಸಮಾಜ ಮತ್ತು ವಿವಾಹ ವಿಚ್ಛೇದನ | 18 |

### ಮುಖ ಪುಟ

ಮಹಿಳಾ ವಿಭಾಗ–ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ

ಯಕ್ಷಗಾನ ಮತ್ತು ರಂಗತರಬೇತಿ ಸಮಿತಿ–ಸುದರ್ಶನ ವಿಜಯ ಹಾಗೂ ಮೀನಾಕ್ಷಿ ಕಲ್ಯಾಣ ಯಕ್ಷಗಾನ ಮತ್ತು ಪುಣ್ಯಕೋಟಿ ನಾಟಕ

ಆರ್.ಎನ್.ಎಸ್. ಯುನಿಟ್ ಭಾರತೀಯ ಸ್ಕೌಟ್ಸ್ ಮತ್ತು ಗೈಡ್ಸ್–ಸಂಸ್ಥಾಪಕರ ದಿನಾಚರಣೆ

ಬಂಟರ ಸಂಘ ಆರ್.ಎನ್.ಎಸ್. ವಿದ್ಯಾನಿಕೇತನ–II ಪ್ರಿ ಪ್ರೈಮರಿ ಗ್ರಾಜ್ಯುಯೇಷನ್ ಡೇ

ಈ ಸಂಚಿಕೆಯಲ್ಲಿ ಪ್ರಕಟವಾದ ಜಾಹೀರಾತು ಮತ್ತು ಲೇಖನಗಳಲ್ಲಿನ ಅಭಿಪ್ರಾಯಗಳು ಆಯಾ ಚಂದಾದಾರರು ಮತ್ತು ಲೇಖಕರಿಗೆ ಸೇರಿದ್ದು, ಇದರಲ್ಲಿ ಬಂಟರ ಸಂಘಕ್ಕೆ ಯಾವುದೇ ತೆರನಾದ ಜವಾಬ್ದಾರಿ ಇರುವುದಿಲ್ಲ – ಸಂಪಾದಕ ಮಂಡಳಿ

# ಸಂಪಾದಕೀಯ



## ಬಂಟ ಸಮಾಜ ಮತ್ತು ಹೋಟೆಲ್ ಉದ್ಯಮ–ಪರಿಶ್ರಮದ ಹಾದಿ, ಇಂದಿನ ಸಂಕಷ್ಟ

ಕರ್ನಾಟಕದ ವ್ಯಾಪಾರ ಹಾಗೂ ಸೇವಾ ಕ್ಷೇತ್ರದ ಇತಿಹಾಸವನ್ನು ನೋಡಿದಾಗ, ಹೋಟೆಲ್ ಉದ್ಯಮದಲ್ಲಿ ಬಂಟ ಸಮಾಜದ ಕೊಡುಗೆ ಅತ್ಯಂತ ಮಹತ್ವದ್ದು ಎಂಬುದು ಎಲ್ಲರಿಗೂ ತಿಳಿದ ಸಂಗತಿ. ಒಂದು ಕಾಲದಲ್ಲಿ ಮಂಗಳೂರು, ಉಡುಪಿ, ಕುಂದಾಪುರ ಗ್ರಾಮಗಳಿಂದ ನಗರಗಳಿಗೆ ಬಂದ ಯುವಕರು ತಮ್ಮ ಪರಿಶ್ರಮ, ಶಿಸ್ತು ಮತ್ತು ಪ್ರಾಮಾಣಿಕತೆಯಿಂದ ಹೋಟೆಲ್ ಉದ್ಯಮವನ್ನು ಒಂದು ದೊಡ್ಡ ಮಟ್ಟಕ್ಕೆ ತಂದು ನಿಲ್ಲಿಸಿದ್ದಾರೆ. ಇಂದು ಬೆಂಗಳೂರು, ಮಂಗಳೂರು, ಮುಂಬೈ ಸೇರಿದಂತೆ ಅನೇಕ ನಗರಗಳಲ್ಲಿ ಕಾಣುವ ಅನೇಕ ಹೋಟೆಲ್‌ಗಳ ಹಿಂದೆ ಬಂಟ ಸಮಾಜ ಕಷ್ಟಪಟ್ಟು ಕಟ್ಟಿದ ಜೀವನ ಹೋರಾಟ ಅಡಗಿದೆ.

ಹೋಟೆಲ್ ಉದ್ಯಮ ಎಂದರೆ ಕೇವಲ ವ್ಯವಹಾರವಲ್ಲ. ಇದು ಪರಿಶ್ರಮದ, ತ್ಯಾಗದ ಮತ್ತು ಸೇವಾಭಾವದ ಪ್ರತೀಕ. ಮುಂಜಾನೆ ಕೆಲಸ ಪ್ರಾರಂಭಿಸಿ ತಡ ರಾತ್ರಿಯವರೆಗೆ ಗ್ರಾಹಕರ ಸೇವೆಯಲ್ಲಿ ತೊಡಗಿರುವ ಹೋಟೆಲ್ ಉದ್ಯಮಿಗಳು ತಮ್ಮ ಕುಟುಂಬದ ಹಬ್ಬ–ಹರಿದಿನಗಳನ್ನೂ ಬಿಟ್ಟು ಕೆಲಸ ಮಾಡುವುದೇ ಸಾಮಾನ್ಯ. ಹೊರಗೆ ನೋಡಿದರೆ ಲಾಭದಾಯಕವಾಗಿ ಕಾಣುವ ಈ ಉದ್ಯಮದ ಹಿಂದೆ ಅನೇಕ ಕಷ್ಟಗಳಿವೆ ಎಂಬುದನ್ನು ಸಮಾಜ ಅರಿಯಬೇಕಾಗಿದೆ.

ಇಂದಿನ ಪರಿಸ್ಥಿತಿಯಲ್ಲಿ ಹೋಟೆಲ್ ಉದ್ಯಮ ಹಲವಾರು ಸವಾಲುಗಳನ್ನು ಎದುರಿಸುತ್ತಿದೆ. ಆಹಾರ ಪದಾರ್ಥಗಳ ಬೆಲೆ ಏರಿಕೆ, ಕಾರ್ಮಿಕರ ಕೊರತೆ, ಅಂಗಡಿ ಬಾಡಿಗೆ ಹೆಚ್ಚಳ, ವಿದ್ಯುತ್ ವೆಚ್ಚ ಎಲ್ಲಾ ಸೇರಿ ಸಣ್ಣ ಮತ್ತು ಮಧ್ಯಮ ಹೋಟೆಲ್ ಉದ್ಯಮಿಗಳಿಗೆ ದೊಡ್ಡ ಹೊರೆ ಆಗಿವೆ. ಇದರ ಜೊತೆಗೆ ಇತ್ತೀಚಿನ ದಿನಗಳಲ್ಲಿ ಇನ್ನೊಂದು ದೊಡ್ಡ ಸಮಸ್ಯೆ ತಲೆದೋರಿದೆ ಅದು ಅಡುಗೆ ಗ್ಯಾಸ್ ಸಂಕಷ್ಟ.

ಜಾಗತಿಕ ಮಟ್ಟದಲ್ಲಿ ನಡೆಯುತ್ತಿರುವ ಯುದ್ಧ ಪರಿಸ್ಥಿತಿಗಳು ಮತ್ತು ಇಂಧನ ಸರಬರಾಜಿನ ಅಸ್ಥಿರಗಳಿಂದ ಗ್ಯಾಸ್ ಸಿಲಿಂಡರ್‌ಗಳ ಲಭ್ಯತೆ ಕಡಿಮೆಯಾಗುತ್ತಿರುವುದು ಹೋಟೆಲ್ ಉದ್ಯಮದ ಮೇಲೆ ನೇರ ಪರಿಣಾಮ ಬೀರುತ್ತಿದೆ. ಗ್ಯಾಸ್ ಸಿಲಿಂಡರ್ ಸಮಯಕ್ಕೆ ಸಿಗದಿದ್ದರೆ ಒಂದು ದಿನವೂ ಹೋಟೆಲ್ ಕಾರ್ಯ ನಿರ್ವಹಿಸಲು ಸಾಧ್ಯವಿಲ್ಲ. ಇದರ ಪರಿಣಾಮವಾಗಿ ಸಣ್ಣ ಹೋಟೆಲ್‌ಗಳು ಮತ್ತು ಮಧ್ಯಮ ಉದ್ಯಮಿಗಳು ದಿನದಿಂದ ದಿನಕ್ಕೆ ಸಂಕಷ್ಟವನ್ನು ಎದುರಿಸುತ್ತಿದ್ದಾರೆ.

ಹೋಟೆಲ್ ಉದ್ಯಮವು ಸಾವಿರಾರು ಜನರಿಗೆ ಉದ್ಯೋಗವನ್ನು ನೀಡುವ ಪ್ರಮುಖ ಕ್ಷೇತ್ರವಾಗಿದೆ. ಈ ಉದ್ಯಮ ಉಳಿದರೆ ಮಾತ್ರ ಅನೇಕ ಕುಟುಂಬಗಳ ಬದುಕು ಸಹ ಸುರಕ್ಷಿತವಾಗಿರುತ್ತದೆ. ಆದ್ದರಿಂದ ಸರ್ಕಾರ ಮತ್ತು ಸಂಬಂಧಿಸಿದ ಅಧಿಕಾರಿಗಳು ಈ ಕ್ಷೇತ್ರದ ಸಮಸ್ಯೆಗಳನ್ನು ಗಂಭೀರವಾಗಿ ಪರಿಗಣಿಸಿ, ವಿಶೇಷವಾಗಿ ಗ್ಯಾಸ್ ಸರಬರಾಜು ಹಾಗೂ ಬೆಲೆ ನಿಯಂತ್ರಣದ ವಿಚಾರದಲ್ಲಿ ಸೂಕ್ತ ಕ್ರಮ ಕೈಗೊಳ್ಳುವುದು ಅಗತ್ಯವಾಗಿದೆ.

ಬಂಟ ಸಮಾಜದ ಪರಿಶ್ರಮ, ಶಿಸ್ತು ಮತ್ತು ಸೇವಾಭಾವವೇ ಈ ಉದ್ಯಮವನ್ನು ಇಷ್ಟು ದೊಡ್ಡ ಮಟ್ಟಕ್ಕೆ ತಂದಿವೆ. ಮುಂದಿನ ಪೀಳಿಗೆಗಳು ಕೂಡ ಈ ಪರಂಪರೆಯನ್ನು ಗೌರವದಿಂದ ಮುಂದುವರಿಸಿ, ಈ ಉದ್ಯಮದ ಗೌರವವನ್ನು ಉಳಿಸಬೇಕಾಗಿದೆ.

ಈ ಸಂದರ್ಭದಲ್ಲಿ ಸಮಾಜವೂ ಹೋಟೆಲ್ ಉದ್ಯಮದ ಹಿಂದೆ ಇರುವ ಪರಿಶ್ರಮವನ್ನು ಅರಿತು, ಈ ಕ್ಷೇತ್ರದ ಸಂಕಷ್ಟಗಳಿಗೆ ಸ್ಪಂದಿಸುವ ಅಗತ್ಯವಿದೆ. ಪರಿಶ್ರಮದ ಬೆವರಿನಿಂದ ಕಟ್ಟಿದ ಈ ಉದ್ಯಮವನ್ನು ಉಳಿಸುವುದು ಎಲ್ಲರ ಜವಾಬ್ದಾರಿಯಾಗಿದೆ.

**ರವೀಂದ್ರ ಶೆಟ್ಟಿ ಹಟ್ಟಿಯಂಗಡಿ**
**ಸಂಪಾದಕರು**

# ಅಧ್ಯಕ್ಷರ ಮಾತು



**ಪ್ರೀತಿಯ ಬಂಟ ಬಾಂಧವರೇ,**

**"ನಾರಿ ಶಕ್ತಿ: ಪರಂ ತೇಜ:, ನಾರಿ ಲೋಕಸ್ಯ ಜೀವನಮ್ । ನಾರಿ ಪ್ರಜ್ಞಾ ಧೃತಿ ಧೈರ್ಯಂ, ನಾರಿ ಸರ್ವಾರ್ಥ ಸಾಧಿನೀ ॥ ನಾರಿ ಮಾತಾ ನಾರಿ ವಿದ್ಯಾ, ನಾರಿ ಲೋಕಸ್ಯ ದೀಪಿಕಾ । ತಸ್ಯಾ: ವಂದನಮಸ್ತು ನಿತ್ಯಂ, ಯಸ್ಯಾ: ಶಕ್ತ್ಯಾ ಜಗತ್ ಸ್ಥಿತಮ್ ॥"**

ಮಹಿಳೆ ಸೃಷ್ಟಿಯ ಮೂಲಶಕ್ತಿ. ಪರಮ ತೇಜಸ್ವಿನಿ ಹಾಗೂ ಲೋಕದ ಜೀವಾಳ. ಶಿಕ್ಷಕಿಯಾಗಿ ಜ್ಞಾನದ ದೀಪ, ಧೈರ್ಯ, ಸ್ಥೈರ್ಯ ಮತ್ತು ಸಾಧನೆಯ ಸ್ವರೂಪಿಣಿ. ಅವಳು ತಾಯಿಯಾಗಿ ಪ್ರೀತಿಯ ಪ್ರತೀಕ, ಲೋಕದ ಬೆಳಕು ಮತ್ತು ಸಮಾಜ ಪರಿವರ್ತನೆಯ ಚೇತನಶಕ್ತಿ. **ಎಲ್ಲಾ ಮಹಿಳೆಯರಿಗೂ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆಯ ಶುಭಾಶಯಗಳು.**

ಬಂಟರ ಸಂಘ ಆರ್. ಎನ್.ಎಸ್. ವಿದ್ಯಾನಿಕೇತನ ಎರಡೂ ಶಾಲೆಯಲ್ಲಿ CET / KCET / JEE full-fledged integrated course ನ್ನು ಈಗಾಗಲೇ ಪ್ರಾರಂಭಿಸಿದ್ದೇವೆ. ಈ ವರ್ಷ ಆರ್.ಎನ್.ಎಸ್. – II ಶಾಲೆಯಲ್ಲಿ CET repeater ಗೆ ಪೂರ್ತಿ ವರ್ಷದ ತರಗತಿಗೆ ದಾಖಲಾತಿ ಆರಂಭಗೊಂಡಿದ್ದು, ಆಗಸ್ಟ್ ತಿಂಗಳಲ್ಲಿ ತರಗತಿಗಳು ಪ್ರಾರಂಭವಾಗಲಿದೆ.

ಬೆಂಗಳೂರು ಬಂಟರ ಸಂಘ ಆರ್.ಎನ್.ಎಸ್. ವಿದ್ಯಾನಿಕೇತನ – II ಸಂಸ್ಥೆಯಲ್ಲಿ "ಸಂಕಲ್ಪ" ಯೋಜನೆಯಡಿಯಲ್ಲಿ 10ನೇ ತರಗತಿಯಲ್ಲಿ ಉನ್ನತ ಶ್ರೇಣಿಯಲ್ಲಿ ಉತ್ತೀರ್ಣರಾಗುವ ಆರ್ಥಿಕವಾಗಿ ಸಂಕಷ್ಟದಲ್ಲಿರುವ ಪ್ರತಿಭಾನ್ವಿತ ಬಂಟ ವಿದ್ಯಾರ್ಥಿಗಳಿಗೆ ಉಚಿತ ಪಿಯುಸಿ ಶಿಕ್ಷಣ (ಸೈನ್ಸ್ ವಿಭಾಗಕ್ಕೆ 40 ವಿದ್ಯಾರ್ಥಿಗಳು ಮತ್ತು ಕಾಮರ್ಸ್ ವಿಭಾಗಕ್ಕೆ 20 ವಿದ್ಯಾರ್ಥಿಗಳು) ಹಾಗೂ ವಸತಿ ಸೌಲಭ್ಯವನ್ನು ಪಡೆಯಲು, ಅರ್ಹ ವಿದ್ಯಾರ್ಥಿಗಳನ್ನು ಆಯ್ಕೆ ಮಾಡುವಲ್ಲಿ ಕಾರ್ಯಪ್ರವೃತ್ತರಾಗಿದ್ದು, ಪರೀಕ್ಷೆಯನ್ನು ದಿನಾಂಕ 26.04.2025, ಭಾನುವಾರದಂದು ಎಲ್ಲಾ ಕೇಂದ್ರಗಳಲ್ಲಿ ಏಕಕಾಲದಲ್ಲಿ ನಡೆಸಲು ನಿಗದಿಸಲಾಗಿದೆ. ಪ್ರತೀ ವಿದ್ಯಾರ್ಥಿಗೆ ವರ್ಷಕ್ಕೆ ರೂ. 1,50,000/– ರಂತೆ 2 ವರ್ಷದ ಪಿಯುಸಿ ವಿದ್ಯಾಭ್ಯಾಸಕ್ಕೆ ಸರಾಸರಿ 60 ವಿದ್ಯಾರ್ಥಿಗಳಿಗೆ ಸಂಘವು ಪ್ರತಿ ವರ್ಷ ಸುಮಾರು 1.8 ಕೋಟಿ ರೂಪಾಯಿಗಳನ್ನು ಭರಿಸುತ್ತಿದೆ.

ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆಯ ಅಂಗವಾಗಿ, ಸಂಘದ ಮಹಿಳಾ ವಿಭಾಗವು, ಸಮುದಾಯದ ಮಹಿಳೆಯರನ್ನೆಲ್ಲಾ ಒಗ್ಗೂಡಿಸಿಕೊಂಡು ಆಯೋಜಿಸಿದ ಕಾರ್ಯಕ್ರಮವು ಹೆಚ್ಚಿನ ಸಂಖ್ಯೆಯಲ್ಲಿ ಸದಸ್ಯರು ಭಾಗವಹಿಸುವುದರೊಂದಿಗೆ ಅತ್ಯಂತ ಯಶಸ್ವೀ ಕಾರ್ಯಕ್ರಮವಾಗಿ ಹೊರಹೊಮ್ಮಿತು.

**ಇಂತಿ ತಮ್ಮ ಪ್ರೀತಿಯ**
**ಸಿಎ. ಅಶೋಕ್ ಶೆಟ್ಟಿ ಎಂ**
**ಅಧ್ಯಕ್ಷರು**

# ಗೌರವ ಕಾರ್ಯದರ್ಶಿಯವರ ವರದಿ



**"ಪ್ರತಿಯೊಬ್ಬರ ಬದುಕಿನಲ್ಲೂ, ಮಹಿಳೆಯ ಪಾತ್ರ ಹಿರಿದು. ಹಲವು ಜವಾಬ್ದಾರಿಗಳನ್ನು ನಿಭಾಯಿಸಿ, ಕುಟುಂಬವನ್ನು ನಡೆಸುವ ಶ್ರೇಷ್ಠ ಶಕ್ತಿ ಮಹಿಳೆ", ಎಲ್ಲಾ ಸ್ತ್ರೀಯರಿಗೂ ಮಹಿಳಾ ದಿನಾಚರಣೆಯ ಶುಭಾಶಯಗಳು.**

**ಮಾನ್ಯ ಸದಸ್ಯರೇ,**

ಆರ್.ಎನ್.ಎಸ್ ಯುನಿಟ್‌ನ ಭಾರತೀಯ ಸ್ಕೌಟ್ಸ್ ಮತ್ತು ಗೈಡ್ಸ್‌ನ ಸಂಸ್ಥಾಪಕರ ದಿನಾಚರಣೆಯನ್ನು ದಿನಾಂಕ 27.02.2026ರಂದು ಬಂಟರ ಸಂಘ ಆರ್.ಎನ್.ಎಸ್ ವಿದ್ಯಾನಿಕೇತನ ಶಾಲಾ ಆವರಣದಲ್ಲಿ ಆಚರಿಸಲಾಯಿತು.

ದಿನಾಂಕ 01.03.2026ರಂದು ಸಂಘದ ಯಕ್ಷಗಾನ ತರಬೇತಿ ಮಕ್ಕಳಿಂದ "ಸುದರ್ಶನ ವಿಜಯ" ಮತ್ತು "ಮೀನಾಕ್ಷಿ ಕಲ್ಯಾಣ" ಯಕ್ಷಗಾನವನ್ನು ಹಾಗೂ ರಂಗತರಬೇತಿ ಮಕ್ಕಳಿಂದ "ಪುಣ್ಯಕೋಟಿ" ನಾಟಕವನ್ನು ಯಶಸ್ವಿಯಾಗಿ ಆಯೋಜಿಸಿದ ಯಕ್ಷಗಾನ ಮತ್ತು ರಂಗತರಬೇತಿ ಸಮಿತಿಯ ಚೇರ್‌ಪರ್ಸನ್ ಮೂಡುಬಗೆ ಶ್ರೀ ಸಂತೋಷ್ ಕುಮಾರ್ ಶೆಟ್ಟಿ, ಸಂಚಾಲಕರಾದ ಶ್ರೀ ಚರಣ್‌ರಾಜ್ ಶೆಟ್ಟಿ ಮತ್ತು ಅವರ ತಂಡಕ್ಕೆ ಅಭಿನಂದನೆಗಳು.

ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆಯ ಅಂಗವಾಗಿ ದಿನಾಂಕ 09.03.2026ರಂದು ಮಹಿಳಾ ವಿಭಾಗದ ವತಿಯಿಂದ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆಯನ್ನು ವಿವಿಧ ಕಾರ್ಯಕ್ರಮಗಳೊಂದಿಗೆ ಸಂಘದ ಆವರಣದಲ್ಲಿ ಆಚರಿಸಲಾಯಿತು. ಕಾರ್ಯಕ್ರಮವನ್ನು ಅಚ್ಚುಕಟ್ಟಾಗಿ ಆಯೋಜಿಸಿದ ಮಹಿಳಾ ವಿಭಾಗದ ಚೇರ್‌ಪರ್ಸನ್ ಶ್ರೀಮತಿ ಯೋಗ್ಯ ಎಲ್. ರೈ, ಸಂಚಾಲಕರಾದ ಶ್ರೀಮತಿ ಮಲ್ಲಿಕಾ ಕೆ. ಶೆಟ್ಟಿ ಮತ್ತು ಅವರ ತಂಡಕ್ಕೆ ಅಭಿನಂದನೆಗಳು.

ಬೆಂಗಳೂರು ಹಾಗೂ ರಾಜ್ಯದ ವಿವಿಧ ಭಾಗಗಳ ಗ್ರಾಮೀಣ ಹಾಗೂ ಆರ್ಥಿಕವಾಗಿ ಸಂಕಷ್ಟದಲ್ಲಿರುವ ಬಂಟ ಸಮುದಾಯದ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಬಂಟರ ಸಂಘ ಆರ್.ಎನ್.ಎಸ್. –II ಸಂಸ್ಥೆಯಲ್ಲಿ ಉಚಿತ ಪಿಯುಸಿ ಶಿಕ್ಷಣ ಹಾಗೂ ವಸತಿ ಕಲ್ಪಿಸುವ ಸಂಕಲ್ಪ ಯೋಜನೆಯ ಸಂಪೂರ್ಣ ವಿವರ ಮತ್ತು ಅರ್ಜಿ ನಮೂನೆಗಳನ್ನು ಈ ಸಂಚಿಕೆಯಲ್ಲಿ ಹಾಗೂ ಸಂಘದ ವೆಬ್‌ಸೈಟ್‌ನಲ್ಲಿ (www.buntsanghablr.com) ಪ್ರಕಟಿಸಲಾಗಿದೆ. ಅತ್ಯಂತ ಅರ್ಹರಿಗೆ ಈ ಯೋಜನೆಯ ಫಲ ಸಿಗುವಂತಾಗಲು ತಮ್ಮೆಲ್ಲರ ಸಹಕಾರವನ್ನು ಕೋರುತ್ತಿದ್ದೇನೆ.

2025–26ನೇ ಸಾಲಿನ ಅಂತಿಮ ಪರೀಕ್ಷೆಗಳು ಪ್ರಾರಂಭವಾಗಿದ್ದು, ಪರೀಕ್ಷೆ ತಯಾರಿಗೆ ಮೂಲಭೂತವಾಗಿ ಅಗತ್ಯವಿರುವ ಮಾನಸಿಕ ಸ್ಥೈರ್ಯ ಮತ್ತು ಮಾರ್ಗದರ್ಶನವನ್ನು ನೀಡಿ ಪ್ರೋತ್ಸಾಹಿಸಬೇಕಾಗಿರುವುದು ಎಲ್ಲಾ ಪೋಷಕರ ಮತ್ತು ಶಿಕ್ಷಕರ ಕರ್ತವ್ಯ.

ಎಸ್.ಎಸ್.ಎಲ್.ಸಿ., ಪಿ.ಯು.ಸಿ ಹಾಗೂ ಇತರ ಪರೀಕ್ಷೆಗಳ ತಯಾರಿಯಲ್ಲಿರುವ ಎಲ್ಲಾ ವಿದ್ಯಾರ್ಥಿಗಳಿಗೂ ಶುಭಹಾರೈಕೆಗಳು.

ವರ್ಷಂಪ್ರತಿಯಂತೆ ಈ ವರ್ಷವೂ ದಿನಾಂಕ 14.04.2026ರಂದು ಹಲವು ಕಾರ್ಯಕ್ರಮಗಳೊಂದಿಗೆ ಬಿಸು (ಯುಗಾದಿ) ಕಾರ್ಯಕ್ರಮವನ್ನು ಆಚರಿಸಲಾಗುವುದು. ಸದಸ್ಯರೆಲ್ಲರೂ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕಾಗಿ ವಿನಂತಿ.

ಇಂತಿ ತಮ್ಮ ಪ್ರೀತಿಯ
**ವಿಜಯ್ ಜೆ. ಶೆಟ್ಟಿ ಹಾಲಾಡಿ**
ಗೌರವ ಕಾರ್ಯದರ್ಶಿ

ಬಂಟರ ಸಂಘ ಬೆಂಗಳೂರು
BUNTS' SANGHA BANGALORE

# ಯಕ್ಷಗಾನ ಮತ್ತು ರಂಗತರಬೇತಿ ಸಮಿತಿ



ಯಕ್ಷಗಾನ ಮತ್ತು ರಂಗತರಬೇತಿ ಸಮಿತಿಯ ವತಿಯಿಂದ ದಿನಾಂಕ 01.03.2026ರಂದು ಸಂಘದ ರಾಧಾಬಾಯಿ ತಿಮ್ಮಪ್ಪ ಭಂಡಾರಿ ಸಭಾಭವನದಲ್ಲಿ ಸಂಘದ ರಂಗತರಬೇತಿಯ ಮಕ್ಕಳಿಂದ ಶ್ರೀ ಸದಾಶಿವ ರೈ ನೀನಾಸಂ ಇವರ ನಿರ್ದೇಶನದಲ್ಲಿ ಮೂಡಿಬಂದ "ಪುಣ್ಯಕೋಟಿ" ನಾಟಕವು ಪ್ರೇಕ್ಷಕರ ಮೆಚ್ಚುಗೆಗೆ ಪಾತ್ರವಾಯಿತು.

ನಂತರ ಶ್ರೀ ಸುಬ್ರಾಯ ಹೆಬ್ಬಾರ್ ಇವರ ನಿರ್ದೇಶನದಲ್ಲಿ ಸಂಘದ ಯಕ್ಷಗಾನ ತರಬೇತಿಯ ಮಕ್ಕಳಿಂದ ಪ್ರದರ್ಶಿಸಲ್ಪಟ್ಟ "ಸುದರ್ಶನ ವಿಜಯ" ಮತ್ತು "ಮೀನಾಕ್ಷಿ ಕಲ್ಯಾಣ" ಯಕ್ಷಗಾನವು ಸಭಿಕರ ಮೆಚ್ಚುಗೆಗೆ ಪಾತ್ರವಾಯಿತು.



ಭಾಗವಹಿಸಿದ ಮಕ್ಕಳಿಗೆ ಪದಾಧಿಕಾರಿಗಳು ಮತ್ತು ಕಾರ್ಯಕಾರಿ ಸಮಿತಿ ಸದಸ್ಯರ ಸಮ್ಮುಖದಲ್ಲಿ ಸ್ಮರಣಿಕೆಯನ್ನು ನೀಡಿ ಗೌರವಿಸಲಾಯಿತು. ಕಾರ್ಯಕ್ರಮಕ್ಕೆ ಸಹಕಾರ ನೀಡಿದ ಸಂಘದ ಆಡಳಿತ ಮಂಡಳಿ, ಕಾರ್ಯಕಾರಿ ಸಮಿತಿ ಸದಸ್ಯರೆಲ್ಲರಿಗೂ ಧನ್ಯವಾದಗಳು. ಈ ಕಾರ್ಯಕ್ರಮಕ್ಕೆ ಆಗಮಿಸಿದ ಸಮಾಜ ಬಾಂಧವರು ಹಾಗೂ ಯಕ್ಷಗಾನ ಪ್ರಿಯರಿಗೆ ವಂದಿಸುತ್ತೇನೆ.



ನೇರ ಪ್ರಾಯೋಜಕತ್ವ ನೀಡಿದವರು; **ಶ್ರೀ ವಿಜಯ್ ಜೆ. ಶೆಟ್ಟಿ ಹಾಲಾಡಿ, ಶ್ರೀಮತಿ ಪ್ರಿಯಾಂಕ ಮತ್ತು ಹೋಟೆಲ್ ಕೃಷ್ಣ ವೈಭವ**

**ಚರಣ್‌ರಾಜ್ ಶೆಟ್ಟಿ**
ಸಂಚಾಲಕರು

ಯಕ್ಷಗಾನ ಮತ್ತು ರಂಗತರಬೇತಿ ಸಮಿತಿ

**ಮೂಡುಬಗೆ ಸಂತೋಷ್ ಕುಮಾರ್ ಶೆಟ್ಟಿ**
ಚೇರ್‌ಪರ್ಸನ್

# ಬಂಟರ ಸಂಘ ಬೆಂಗಳೂರು–ಮಹಿಳಾ ವಿಭಾಗ
# ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ

ಬಂಟರ ಸಂಘ ಬೆಂಗಳೂರು ಮಹಿಳಾ ವಿಭಾಗದ ವತಿಯಿಂದ ಅಂತರಾಷ್ಟ್ರೀಯ ಮಹಿಳಾ ದಿನಾಚರಣೆ ಕಾರ್ಯಕ್ರಮವು ಮಾರ್ಚ್ 09, 2026ರಂದು ಮಧ್ಯಾಹ್ನ 2 ಗಂಟೆಯಿಂದ ಉತ್ಸಾಹಿ ಮಹಿಳಾ ವಿಭಾಗದ ಸದಸ್ಯೆಯರೊಂದಿಗೆ ಯಶಸ್ವಿಯಾಗಿ ನೆರವೇರಿತು.



ಸಂಘದ ಅಧ್ಯಕ್ಷರಾದ ಸಿಎ. ಅಶೋಕ್ ಶೆಟ್ಟಿ ಎಂ.ರವರು ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದರು. ವೇದಿಕೆಯಲ್ಲಿ ಸಂಘದ ಗೌರವ ಕಾರ್ಯದರ್ಶಿ ಶ್ರೀ ವಿಜಯ್ ಜೆ. ಶೆಟ್ಟಿ ಹಾಲಾಡಿ, ಮಹಿಳಾ ಉಪಾಧ್ಯಕ್ಷೆ ಶ್ರೀಮತಿ ಕಾಂತಿ ಶೆಟ್ಟಿ, ಜೊತೆ ಕಾರ್ಯದರ್ಶಿ ಶ್ರೀಮತಿ ಜಯಶ್ರೀ ಸಿ. ರೈ, ಮಹಿಳಾ ವಿಭಾಗದ ಚೇರ್‌ಪರ್ಸನ್ ಶ್ರೀಮತಿ ಯೋಗ್ಯ ಎಲ್. ರೈ ಹಾಗೂ ಸಂಚಾಲಕರಾದ ಶ್ರೀಮತಿ ಮಲ್ಲಿಕಾ ಕೆ. ಶೆಟ್ಟಿ ಇವರುಗಳು ಉಪಸ್ಥಿತರಿದ್ದರು.



ಪ್ರಮಿತಾ ಶೆಟ್ಟಿ, ಪ್ರೇಮ ಮತ್ತು ವಿಶ್ಮಿತಾರವರ ಪ್ರಾರ್ಥನೆಯೊಂದಿಗೆ ಸಭಾಕಾರ್ಯಕ್ರಮವು ಆರಂಭವಾಯಿತು. ಚೇರ್‌ಪರ್ಸನ್ ಶ್ರೀಮತಿ ಯೋಗ್ಯ ಎಲ್. ರೈಯವರು ಎಲ್ಲರನ್ನೂ ಪ್ರೀತಿ ಪೂರ್ವಕವಾಗಿ ಸ್ವಾಗತಿಸಿದರು. ವೇದಿಕೆಯಲ್ಲಿ ವಿರಾಜಿಸಿದ ಗಣ್ಯರೆಲ್ಲರೂ ದೀಪ ಪ್ರಜ್ವಲನೆ ನೆರವೇರಿಸುವುದರೊಂದಿಗೆ ಮಹಿಳಾ ವಿಭಾಗದ ಸದಸ್ಯರಿಂದ ಬಂಟ ಗೀತೆಯನ್ನು ಹಾಡಲಾಯಿತು.

ಅಧ್ಯಕ್ಷರಾದ ಸಿಎ. ಅಶೋಕ್ ಶೆಟ್ಟಿ ಎಂ.ರವರು ಮಹಿಳೆಯರಿಗೆಲ್ಲರಿಗೂ ಶುಭಕೋರಿದರು. ಮಹಿಳಾ ಉಪಾಧ್ಯಕ್ಷೆ ಶ್ರೀಮತಿ ಕಾಂತಿ ಶೆಟ್ಟಿಯವರು ತಮ್ಮ ಭಾಷಣದಲ್ಲಿ ಮಹಿಳಾ ದಿನಾಚರಣೆಯ ಮಹತ್ವವನ್ನು ಹಾಗೂ ಮಹಿಳೆಯರ ಪಾತ್ರವನ್ನು ಸಂಕ್ಷಿಪ್ತವಾಗಿ ವಿವರಿಸಿದರು. ಗೌರವ ಕಾರ್ಯದರ್ಶಿ ಶ್ರೀ ವಿಜಯ್ ಜೆ. ಶೆಟ್ಟಿ ಹಾಲಾಡಿಯವರು ಮಹಿಳಾ ದಿನಾಚರಣೆಯನ್ನು ಉದ್ದೇಶಿಸಿ ಮಾತನಾಡಿದರು. ಜೊತೆ ಕಾರ್ಯದರ್ಶಿಯವರಾದ ಶ್ರೀಮತಿ ಜಯಶ್ರೀ ಸಿ. ರೈಯವರು, ಮಾಜಿ ಮಹಿಳಾ ಪದಾಧಿಕಾರಿಗಳು ಮತ್ತು ಮಹಿಳಾ ವಿಭಾಗದ ಚೇರ್‌ಪರ್ಸನ್ ಮತ್ತು ಸಂಚಾಲಕರುಗಳ ಕಾರ್ಯವಿಧಾನವನ್ನು ಕೊಂಡಾಡಿದರು.

ಮಹಿಳಾ ದಿನಾಚರಣೆಯ ಅಂಗವಾಗಿ ಸಂಘದ ಮಹಿಳಾ ಸದಸ್ಯೆಯರಿಗೆ ಬೆಂಕಿ ರಹಿತ ಅಡುಗೆ ಸ್ಪರ್ಧೆಯನ್ನು ಏರ್ಪಡಿಸಲಾಗಿತ್ತು. 15 ಗುಂಪುಗಳ ಒಟ್ಟು 29 ಮಹಿಳಾ ಸದಸ್ಯೆಯರು ಸ್ಪರ್ಧೆಯಲ್ಲಿ ಭಾಗವಹಿಸಿದ್ದರು. The Reservoire cocktail Bar and Kitchen Executive Chef ಆಗಿ ಕಾರ್ಯನಿರ್ವಹಿಸುತ್ತಿರುವ ಶ್ರೀ ಶಿವಶಂಕರ್‌ರವರು ನಮ್ಮ ಅಡುಗೆ ಸ್ಪರ್ಧೆಯ ತೀರ್ಪುಗಾರರಾಗಿ ಭಾಗವಹಿಸಿ, ಸೂಕ್ತ ಸಲಹೆ ಸೂಚನೆಗಳೊಂದಿಗೆ ತಮ್ಮ ತೀರ್ಪನ್ನು ಘೋಷಿಸಿದರು. ತೀರ್ಪುಗಾರರ ಪರಿಚಯವನ್ನು ಉಪಸಮಿತಿಯ ಸದಸ್ಯರಾದ ಶ್ರೀಮತಿ ಸುಚಿತ್ರಾ ಎ. ಶೆಟ್ಟಿಯವರು ಪರಿಚಯಿಸಿದರು.



ಈ ಸ್ಪರ್ಧೆಯಲ್ಲಿ ಶ್ರೀಮತಿ ಅನುಷಾ ಶೆಟ್ಟಿ ಮತ್ತು ವಿಶ್ಮಿತಾ ಶೆಟ್ಟಿಯವರು ಪ್ರಥಮ ಬಹುಮಾನವನ್ನು, ಶ್ರೀಮತಿ ಅಶ್ವಿನಿ ಪಿ. ಶೆಟ್ಟಿ ಮತ್ತು ನಕ್ಷತ್ರ ಶೆಟ್ಟಿಯವರು ದ್ವಿತೀಯ ಬಹುಮಾನವನ್ನು, ಶ್ರೀಮತಿ ಶಕೀಲಾ ಶೆಟ್ಟಿ ಮತ್ತು ಶ್ರುತಿ ಎಸ್. ಕದಂಬರವರು ತೃತೀಯ ಬಹುಮಾನವನ್ನು ಮತ್ತು ಅಕ್ಷತಾ ಎಸ್. ಶೆಟ್ಟಿ ಮತ್ತು ಸಮೃದ್ಧಿ ಶೆಟ್ಟಿಯವರು ಉತ್ತಮ ಪ್ರಸ್ತುತಿ ಬಹುಮಾನವನ್ನು ಪಡೆದುಕೊಂಡರು.

ಅಂತರಾಷ್ಟ್ರೀಯ ಖ್ಯಾತಿಯ ಜನಪದ ಗಾಯಕರಾದ ಡಾ। ನಾಗೇಶ್‌ರವರ ತಂಡದಿಂದ ಸಂಗೀತ ಕಾರ್ಯಕ್ರಮ ನೆರೆದಿದ್ದ ಮಹಿಳಾ ಸದಸ್ಯರನ್ನು ಹುಚ್ಚೆದ್ದು ಕುಣಿಯುವಂತೆ ಪ್ರೇರೆಪಿಸಿತು. ಮಹಿಳೆಯರಿಗಾಗಿ ಲಕ್ಕಿ ಲೇಡಿ, passing the heart, ಹೌಸಿ ಆಟಗಳನ್ನು ಮಹಿಳಾ ವಿಭಾಗದ ಸದಸ್ಯೆಯರೆಲ್ಲರು ನಡೆಸಿಕೊಟ್ಟರು.



ಉಪಸಮಿತಿಯ ಸದಸ್ಯರಾದ ಶ್ರೀಮತಿ ಮಾಲಾ ಭಾಸ್ಕರ್ ಶೆಟ್ಟಿಯವರು ಕಾರ್ಯಕ್ರಮವನ್ನು ಅಚ್ಚುಕಟ್ಟಾಗಿ ನಿರೂಪಿಸಿದರು. ಕೊನೆಯದಾಗಿ ಮಹಿಳಾ ವಿಭಾಗದ ಸಂಚಾಲಕರಾದ ಶ್ರೀಮತಿ ಮಲ್ಲಿಕಾ ಕೆ. ಶೆಟ್ಟಿಯವರು ಪ್ರತಿಯೊಬ್ಬರಿಗೂ ಧನ್ಯವಾದ ಸಮರ್ಪಿಸಿದರು.

ಉತ್ತಮ ಮಟ್ಟದ ಲಘು ಉಪಹಾರ ಸೇವಿಸಿ ಕಾರ್ಯಕ್ರಮ ಸಮಾಪ್ತಿಗೊಂಡು ಎಲ್ಲರ ಪ್ರಶಂಸೆಗೆ ಪಾತ್ರವಾಯಿತು.

**ನೇರ ಪ್ರಾಯೋಜಕತ್ವ ನೀಡಿ ಸಹಕರಿಸಿದವರು;**

ಶ್ರೀ ರಮೇಶ್ ಜಿ. ಶೆಟ್ಟಿ – ಉತ್ತಮ ಪ್ರಸ್ತುತಿ

ಶ್ರೀಮತಿ ಮಾಲಾ ಭಾಸ್ಕರ್ ಶೆಟ್ಟಿ – ಫೋಟೋಗ್ರಫಿ ಮತ್ತು ವೀಡಿಯೊ

ಶ್ರೀಮತಿ ಶಾಲಿನಿ ಪಿ. ಶೆಟ್ಟಿ – ಗೇಮ್ಸ್, ಲಕ್ಕಿ ಲೇಡಿ, ಹೌಸಿ

ಈ ಕಾರ್ಯಕ್ರಮವನ್ನು ಯಶಸ್ವಿಗೊಳಿಸಲು ಪ್ರತ್ಯಕ್ಷವಾಗಿ ಹಾಗೂ ಪರೋಕ್ಷವಾಗಿ ಸಹಕರಿಸಿದ ಎಲ್ಲಾ ಆತ್ಮೀಯ ಬಾಂಧವರಿಗೆ ಮಹಿಳಾ ವಿಭಾಗದ ಪರವಾಗಿ ಹೃತ್ಪೂರ್ವಕ ಧನ್ಯವಾದಗಳು.

**ಮಲ್ಲಿಕಾ ಕೆ. ಶೆಟ್ಟಿ**
ಸಂಚಾಲಕರು, ಮಹಿಳಾ ವಿಭಾಗ

**ಯೋಗ್ಯ ಎಲ್. ರೈ**
ಚೇರ್‌ಪರ್ಸನ್, ಮಹಿಳಾ ವಿಭಾಗ

## Auditorium Booking Status as on 10.03.2026

| Sl. No. | Booking Date | Prog. date | Party name | Booking Category Member/Non Member | Prog. Details |
|---|---|---|---|---|---|
| 1 | 12-02-2026 | 14-03-2026 | Bhaskar Nayak C | Non Member | Social Organization |
| 2 | 16-02-2026 | 21-05-2026 | Gayathri college of nursing | Non Member | Social Organization |
| 3 | 19-02-2026 | 14-05-2026 | Suresh Kumar Shetty | Member | Marriage & Reception |
| 4 | 23-02-2026 | 24-03.2026 | Jubilee mission college of nursing | Non Member | Social Organization |
| 5 | 25-02-2026 | 28.04.2026 to 29.04.2026 | Keshava KG | Non Member | Marriage & Reception |
| 6 | 02-03-2026 | 13-12-2026 | Divakar H | Non Member | Marriage & Reception |
| 7 | 02-03-2026 | 13-03-2026 | Geetha Shetty | Member | Uttarakriye |
| 8 | 07-03-2026 | 20-03-2026 | Deviprasad Shetty | Member | Uttarakriye |

# ಬಂಟರ ಸಂಘ ಬೆಂಗಳೂರು
# ವೈದ್ಯಕೀಯ ಮತ್ತು ವಿಮಾ ಸಮಿತಿ – 2024–26

ದಿನಾಂಕ 26.01.2026 ರಂದು ಬೆಂಗಳೂರು ಬಂಟರ ಸಂಘದ ವೈದ್ಯಕೀಯ ವಿಭಾಗವು ಆಯೋಜಿಸಿದ ಉಚಿತ ತಜ್ಞ ವೈದ್ಯಕೀಯ ಶಿಬಿರ, ರಕ್ತದಾನ ಶಿಬಿರ, ಶ್ರವಣ ಪರೀಕ್ಷೆ, CPR ಪ್ರಾತ್ಯಕ್ಷತೆ ಮತ್ತು ಆಸ್ಪತ್ರೆಗಳೊಂದಿಗೆ ಒಡಂಬಡಿಕೆ ಕಾರ್ಯಕ್ರಮವು ಯಶಸ್ವಿಯಾಗಿ ನಡೆದಿರುವುದು ತಮಗೆಲ್ಲಾ ತಿಳಿದಿದೆ. ಈ ಕಾರ್ಯಕ್ರಮದಲ್ಲಿ ವೈದ್ಯಕೀಯ ಧನ ಸಹಾಯ ಅಗತ್ಯ ಇರುವ ಸಮಾಜ ಬಾಂಧವರಿಗೆ ಆರ್ಥಿಕ ಸಹಾಯ ನೀಡಲು, ಸಂಘಕ್ಕೆ ಧನಸಹಾಯ ಮಾಡಿದ ದಾನಿಗಳನ್ನು ತುಂಬು ಹೃದಯದ ಧನ್ಯವಾದಗಳೊಂದಿಗೆ ಸ್ಮರಿಸುತ್ತೇವೆ.

ಧನಸಹಾಯ ನೀಡಿದ ಮಹನೀಯರ ವಿವರಗಳು ಈ ಕೆಳಗಿನಂತಿದೆ:–

1. ಸಿಎ. ಅಶೋಕ್ ಶೆಟ್ಟಿ ಎಂ. – ಅಧ್ಯಕ್ಷರು – ರೂ. 7,500/–
2. ಶ್ರೀ ಸುನೀಲ್ ಕುಮಾರ್ ಶೆಟ್ಟಿ ಜೆ. – ಕಾರ್ಯಕಾರಿ ಸಮಿತಿ ಸದಸ್ಯರು – ರೂ. 20,000/–
3. ಡಾ. ಜಗದೀಶ್ ಶೆಟ್ಟಿ.– ಮಾಜಿ ಉಪಾಧ್ಯಕ್ಷರು – ರೂ. 10,000/–
4. ಶ್ರೀ ಅಮರನಾಥ್ ಶೆಟ್ಟಿ ಹೆಚ್. – ಮಾಜಿ ಖಜಾಂಚಿಯವರು – ರೂ. 10,000/–
5. ಡಾ. ದೀಪಕ್ ಶೆಟ್ಟಿ. – ಮಾಜಿ ಖಜಾಂಚಿಯವರು – ರೂ. 10,000/–
6. ಶ್ರೀ ಶಿವಾನಂದ್ ಶೆಟ್ಟಿ ಟಿ. – ತೊಂಭತ್ತು ಇನ್ಫ್ರಾ – ರೂ. 10,000/–
7. ಶ್ರೀ ರವೀಂದ್ರನಾಥ್ ಮಾರ್ಲ – ಶೀಲಾ ಇಕ್ವಿಪ್‌ಮೆಂಟ್ – ರೂ. 10,000/–
8. ಶ್ರೀ ಮೈತ್ರಿ ಸಂತೋಷ್ ಶೆಟ್ಟಿ. – ಮೈತ್ರಿ ಗ್ರೂಪ್ – ರೂ. 10,000/–
9. ಶ್ರೀ ರಮಿತ್ ಬಿ. ಶೆಟ್ಟಿ – ಮಾಜಿ ಕಾರ್ಯಕಾರಿ ಸಮಿತಿ ಸದಸ್ಯರು – ರೂ. 10,000/–
10. ಡಾ. ಸುರೇಂದ್ರ ಶೆಟ್ಟಿ – ಕೊಡ್ಲಾಡಿ – ರೂ. 10,000/–

ಒಟ್ಟು ಮೊತ್ತ – ರೂ. 1,07,500/–

**ರಕ್ತದಾನ ಶಿಬಿರ:–**

ದಿನಾಂಕ 26.01.2026, ಸೋಮವಾರ (ಗಣರಾಜ್ಯೋತ್ಸವ ದಿನದಂದು) ಬೆಂಗಳೂರು ಬಂಟರ ಸಂಘದ ಆವರಣದಲ್ಲಿ ಸಂಘದ ವೈದ್ಯಕೀಯ ವಿಭಾಗ ಮತ್ತು ವಿವಿಧ ಆಸ್ಪತ್ರೆಗಳ ಸಹಯೋಗದೊಂದಿಗೆ ಉಚಿತ ತಜ್ಞ ವೈದ್ಯಕೀಯ ಶಿಬಿರದೊಂದಿಗೆ ಲಯನ್ಸ್ ಮತ್ತು ಅನನ್ಯ ತಂಡದಿಂದ ರಕ್ತದಾನ ಶಿಬಿರವನ್ನು ಯಶಸ್ವಿಯಾಗಿ ನಡೆಸಲಾಯಿತು.






**ಸುಪ್ರೀತ್ ಶೆಟ್ಟಿ**
ಸಂಚಾಲಕರು, ವೈದ್ಯಕೀಯ ಸಮಿತಿ

**ಪ್ರಶಾಂತ್ ಶೆಟ್ಟಿ ಎಸ್.**
ಚೇರ್‌ಪರ್ಸನ್, ವೈದ್ಯಕೀಯ ಸಮಿತಿ

## ಬಂಟರ ಸಂಘ ಆರ್.ಎಸ್.ಎಸ್. ವಿದ್ಯಾನಿಕೇತನ–I - ಸ್ಕೌಟ್ಸ್ ಮತ್ತು ಗೈಡ್ಸ್ ಸಂಸ್ಥಾಪಕರ ದಿನ



ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಬಿ.ಎಸ್.ಆರ್.ಎನ್.ಎಸ್ ಘಟಕವು ಬಂಟರ ಸಂಘ ಆರ್.ಎನ್.ಎಸ್. ವಿದ್ಯಾನಿಕೇತನದಲ್ಲಿ ಸ್ಕೌಟ್ಸ್ ಮತ್ತು ಗೈಡ್ಸ್ ಸಂಸ್ಥಾಪಕರ ದಿನವನ್ನು ದಿನಾಂಕ 27.02.2026ರಂದು ಭವ್ಯವಾಗಿ ಮತ್ತು ಅರ್ಥಪೂರ್ಣವಾಗಿ ಆಚರಿಸಿತು. ಲಾರ್ಡ್ ಬೇಡನ್ ಪೋವೆಲ್ ಅವರ ಜೀವನದ ಆದರ್ಶಗಳನ್ನು ಮೈಗೂಡಿಸಿಕೊಳ್ಳುವ ಸಲುವಾಗಿ ಈ ದಿನವನ್ನು ಆಚರಿಸಲಾಯಿತು. ವಿದ್ಯಾರ್ಥಿಗಳಲ್ಲಿ ಸೇವಾ ಮನೋಭಾವ, ದೇಶಭಕ್ತಿ, ಶಿಸ್ತು, ನಾಯಕತ್ವ ಗುಣಗಳನ್ನು ಬೆಳೆಸುವ ಈ ಚಳುವಳಿಯು, ನಮ್ಮ ಸಂಸ್ಥೆಯಲ್ಲಿ ಸುಮಾರು 400 ಸ್ಕೌಟ್ಸ್, ಗೈಡ್ಸ್, ಕಬ್ಸ್ ಮತ್ತು ಬುಲ್‌ಬುಲ್ಸ್‌ಗಳನ್ನು ಹೊಂದಿದೆ.

ಕಾರ್ಯಕ್ರಮವು ಸರ್ವಧರ್ಮ ಪ್ರಾರ್ಥನೆಯಿಂದ ಆರಂಭಗೊಂಡು ಧ್ವಜಾರೋಹಣ, ಪದವಿ ಸ್ವೀಕಾರ, ಪ್ರಶಸ್ತಿ ಪ್ರದಾನ, ಶಿಬಿರಾಗ್ನಿ, ಆಟಗಳು, ದೇಶಾಭಿಮಾನ ಮತ್ತು ಸಂಸ್ಕೃತಿಯನ್ನು ಬಿಂಬಿಸುವ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆದವು.

ಕಾರ್ಯಕ್ರಮದಲ್ಲಿ ಬಂಟರ ಸಂಘದ ಅಧ್ಯಕ್ಷರು, ಗೌರವ ಕಾರ್ಯದರ್ಶಿಗಳು, ಸಂಸ್ಥೆಯ ಪ್ರಾಂಶುಪಾಲರು ಉಪಸ್ಥಿತರಿದ್ದರು. ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ವಿಜಯನಗರ ಸ್ಥಳೀಯ ಸಂಸ್ಥೆಯ ಕಾರ್ಯದರ್ಶಿಗಳಾದ ಶ್ರೀಯುತ ಡಿ. ಸಿದ್ಧಗಂಗಯ್ಯ ಅವರು ಆಗಮಿಸಿದ್ದರು. ಮುಖ್ಯ ಅತಿಥಿಗಳು ಮಕ್ಕಳಿಗೆ ಹಿತವಚನಗಳನ್ನು ಮತ್ತು ಉನ್ನತ ಪದವಿ ಪಡೆಯಲು ಪ್ರೋತ್ಸಾಹಕರ ಮಾತುಗಳನ್ನು ಆಡಿದರು. ಸ್ಕೌಟ್ಸ್ ಮತ್ತು ಗೈಡ್ಸ್ ಇತರ ಸಾಮಾನ್ಯ ವಿದ್ಯಾರ್ಥಿಗಳಿಗಿಂತ ಹೇಗೆ ಭಿನ್ನ? ಎಂದು ಬಂಟರ ಸಂಘದ ಅಧ್ಯಕ್ಷರು ಪ್ರೇರೇಪಣೆ ನೀಡಿದರು. ಸ್ಕೌಟ್ಸ್, ಗೈಡ್ಸ್ ಫ್ಲಾಕ್‌ಲೀಡರ್ಸ್, ಕ್ಲಬ್ ಮಾಸ್ಟರ್ಸ್‌ಗಳ ಸಹಕಾರದೊಂದಿಗೆ ಕಾರ್ಯಕ್ರಮವು ಸಂಪನ್ನಗೊಂಡಿತು.

---

ಬಂಟರ ಸಂಘ ಬೆಂಗಳೂರು
BUNTS' SANGHA BANGALORE

## ಸಾಹಿತ್ಯ ಮತ್ತು ಪ್ರಕಾಶನ ಸಮಿತಿ
## ನಿಮಗೊಂದು ಅವಕಾಶ

ಬಂಟರ ಸಂಘದ ಮಾಸ ಪತ್ರಿಕೆಯಾದ **"ಸ್ನೇಹಚಿಂತನೆ"**ಗೆ ಲೇಖನ, ಕಥೆ, ಕವನ, ಹಾಸ್ಯ–ಬರಹ, ಚುಟುಕು, ಪದಬಂಧ ರಚನೆ, ಕ್ರೀಡಾ ಲೇಖನಗಳನ್ನು ಓದುಗರಿಂದ ಆಹ್ವಾನಿಸುತ್ತಿದ್ದೇವೆ. ನಮ್ಮ ಪತ್ರಿಕೆಯು ಉದಯೋನ್ಮುಖ ಬರಹಗಾರರಿಗೆ ನಿಮ್ಮ ಪ್ರತಿಭೆಯನ್ನು ಅನಾವರಣಗೊಳಿಸಲು ಅವಕಾಶ ಕಲ್ಪಿಸಲಿದೆ. ನಿಮ್ಮ ಬರಹಗಳನ್ನು ಸ್ಪಷ್ಟವಾಗಿ ಬರೆದು ಅಥವಾ ಟೈಪ್ ಮಾಡಿ ನಮಗೆ ಇಮೇಲ್ ಮೂಲಕ ಕಳುಹಿಸಬಹುದು ಅಥವಾ ಸಂಘದ ಕಚೇರಿಯನ್ನು ಸಂಪರ್ಕಿಸಬಹುದಾಗಿದೆ ಹಾಗೂ ಪತ್ರಿಕೆಗೆ ಜಾಹೀರಾತನ್ನು ನೀಡಬಯಸುವವರು ಸಂಘದ ಕಚೇರಿಯನ್ನು ಸಂಪರ್ಕಿಸಬಹುದಾಗಿದೆ.

**ದೂರವಾಣಿ ಸಂಖ್ಯೆ: 080–23399323 / 7022119739**

ಇಮೇಲ್ ಐಡಿ: **buntsanghabangalore@yahoo.in / info@buntsanghablr.com**

**ವಿಜಯ್ ಜೆ. ಶೆಟ್ಟಿ ಹಾಲಾಡಿ**
ಗೌರವ ಕಾರ್ಯದರ್ಶಿ

**ಸಿ.ಎ. ಅಶೋಕ್ ಶೆಟ್ಟಿ ಎಂ.**
ಅಧ್ಯಕ್ಷರು

**ದೀಪಕ್ ಶೆಟ್ಟಿ**
ಸಹ–ಸಂಪಾದಕರು, ಸಾಹಿತ್ಯ ಮತ್ತು ಪ್ರಕಾಶನ ಸಮಿತಿ

**ರವೀಂದ್ರ ಶೆಟ್ಟಿ ಹಟ್ಟಿಯಂಗಡಿ**
ಚೇರ್‌ಪರ್ಸನ್, ಸಾಹಿತ್ಯ ಮತ್ತು ಪ್ರಕಾಶನ ಸಮಿತಿ

**ಪದಾಧಿಕಾರಿಗಳು, ಕಾರ್ಯಕಾರಿ ಸಮಿತಿ ಸದಸ್ಯರು ಹಾಗೂ ಸಾಹಿತ್ಯ ಮತ್ತು ಪ್ರಕಾಶನ ಸಮಿತಿ ಸದಸ್ಯರು**

## Bunts' Sangha RNS Vidyaniketan-II
## Graduation Day & Rhyme Time Celebration - 28th February 2026



Graduation is an exciting time. It marks both an ending and a new beginning. It is a time filled with warm memories of the past and big dreams for the future.

Bunts' Sangha RNS Vidyaniketan II, Tavarekere, celebrated Graduation Day and Rhyme Time on 28th February 2026 to applaud the young and enthusiastic learners of the Pre-primary section.

The occasion was graced by the honorable President, Shri CA Ashok Shetty, and the honorable Treasurer, Shri Ashok Kumar Shetty. The ceremony was also attended by the proud parents of the Pre-primary students.

The celebration commenced with a beautiful inaugural welcome dance performed by the students of Grade 1 and Grade 2. This was followed by the lighting of the ceremonial lamp by the dignitaries and our respected Principal, Azil Arasi Ma'am, followed by Saraswati Vandana to invoke the blessings of Goddess Saraswati.

Our beloved Principal, Azil Arasi Ma'am, warmly welcomed the gathering and inspired the students with her words of wisdom.

In their address, the President and Treasurer highlighted the vision of the school and emphasized the vital role of parents and teachers in the learning journey of students.

Parent representatives expressed their heartfelt gratitude to the school and the teachers for nurturing their children and instilling values such as humility, confidence, and self-esteem through a wide spectrum of activities.

The most important part of the day-the Graduation Ceremony-began with the tiny tots of UKG dressed in graduation robes and caps walking gracefully onto the stage. The Principal and Chief Guest felicitated the students with trophies and certificates of graduation.

The Pre-primary students performed lively and peppy dance numbers that left everyone spellbound with their mesmerizing performances. Another delightful presentation was the Rhyme Drill by the little stars of the Kindergarten, which charmed the audience.

The "Krishna Leela" performance by the students of Grade 1 and Grade 2 was the showstopper of the day. Vibrant music, colorful costumes, graceful dance, and perfectly coordinated movements created a magical atmosphere. Their energetic performance and rhythmic clapping encouraged the audience to sway along with the lively beats.

The beautiful skit "Alice in Wonderland" transported the audience into a dreamy magical world. Everyone thoroughly enjoyed the enchanting performance.

Proud parents applauded with joy as the little graduates walked across the stage with bright smiles and excitement.

The Principal addressed the gathering and congratulated the students on their achievements. Her inspiring words encouraged the children to continue learning with curiosity and confidence.

The program concluded with a Vote of Thanks, expressing gratitude to the Management, Teachers, Parents, and Students who contributed to making the event a grand success.

The Rhyme Time and Graduation Day celebration was truly a memorable and heartwarming occasion that celebrated the achievements and bright future of our little learners.

Invesco Mutual Fund



From one opportunity to the next with Flexicap Funds.

Aim to benefit across large, mid and small caps.

invescomutualfund.com

Follow us on

An investor education and awareness initiative.

For Know Your Customer (KYC) guidelines along with the documentary requirements and procedure for change of address, phone number, bank details, etc., please visit the Education and Guidance section on www.invescomutualfund.com. Investor should deal with only SEBI registered Mutual Funds, details of which can be verified under "Intermediaries/Market Infrastructure Institutions" on https://www.sebi.gov.in/index.html. For any grievance / complaint, please call us on 1800-209-0007 or write to us at mfservices@invescoindia.com. Alternatively, complaints can be registered on the SEBI SCORES Portal at https://scores.sebi.gov.in

**Mutual Fund investments are subject to market risks, read all scheme related documents carefully.**

RAMESH RAI ANAJAE
Cell.No: 9900534530
# 35, 1st Main, 4th Cross, Shivu Layout, Mariyappanapalya, Bangalore - 56.

NAMMA WEALTH
First Trust, Then Wealth
www.nammawealth.in

SERVICE AVAILABLE AT NAMMA WEALTH, BANGALORE

| Investments | Insurance | Loan |
|---|---|---|
| Mutual Fund | Term Insurance | Home Loan |
| SIP Planning | Health Insurance | Personal Loan |
| SWP Planning | Vehicle Insurance | Vehicle Loan |
| ELSS Planning | PA Insurance | Business Loan |

ADVT.

ಬಂಟರ ಸಂಘ ಬೆಂಗಳೂರು
BUNTS' SANGHA BANGALORE

# ಶ್ರೀ ವರಸಿದ್ಧಿ ವಿನಾಯಕ ಪ್ರಾರ್ಥನಾ ಮಂದಿರ ಸಮಿತಿ



ಶ್ರೀ ವರಸಿದ್ಧಿ ವಿನಾಯಕ ಪ್ರಾರ್ಥನಾ ಮಂದಿರದಲ್ಲಿ ಸಂಕಷ್ಟಿ, ರಂಗಪೂಜೆ, ಸತ್ಯನಾರಾಯಣ ಪೂಜೆ, ಶಾಶ್ವತ ಪೂಜೆ ಮತ್ತು ಇತರ ಪೂಜೆಗಳು ವಿಜೃಂಭಣೆಯಿಂದ ನಡೆಯುತ್ತಿದೆ.

ಇಲ್ಲಿಯವರೆಗೆ ಸುಮಾರು 30 ರಂಗಪೂಜೆ, 130 ಶಾಶ್ವತ ಪೂಜೆಯನ್ನು ಸೇವಾಕರ್ತರಿಂದ ಸ್ವೀಕರಿಸಲಾಗಿದೆ. ಭಕ್ತಾಧಿಗಳಿಂದ ಸ್ವೀಕರಿಸಲಾದ ಶಾಶ್ವತ ಪೂಜೆಯ ಮೊತ್ತ ಸುಮಾರು ರೂ. 1,60,000/–ವನ್ನು ಫಿಕ್ಸೆಡ್ ಡೆಪಾಸಿಟ್ ಮಾಡಲಾಗಿದೆ. ಈವರೆಗೆ ಸುಮಾರು ರೂ.3,76,970/– ಕಾಣಿಕೆ ಹುಂಡಿಯಿಂದ ಸಂಗ್ರಹಿಸಲಾಗಿದೆ.

ಮಕ್ಕಳ ಭಜನಾ ತರಬೇತಿಯು ಉತ್ತಮ ರೀತಿಯಲ್ಲಿ ನಡೆಯುತ್ತಿದ್ದು, ಮಕ್ಕಳಿಗೆ ಪರೀಕ್ಷೆ ಇರುವ ಕಾರಣ ಮೇ ತನಕ ಭಜನಾ ತರಗತಿಯನ್ನು ಸ್ಥಗಿತಗೊಳಿಸಲಾಗಿದೆ. ದೇವಸ್ಥಾನದಲ್ಲಿ ಭಜನೆಗೆ ಹೊಸದಾಗಿ ಆಡಿಯೋ ಸಿಸ್ಟಮ್ ಖರೀದಿಸಲಾಗಿದೆ.

ಶ್ರೀಮತಿ ಚೇತನಾ ಶೆಟ್ಟಿ, ಶ್ರೀ ಪ್ರಸಾದ್ ಶೆಟ್ಟಿ, ಶ್ರೀಮತಿ ಮಾಲತಿ ಅರುಣ್ ಶೆಟ್ಟಿಯವರು ಶ್ರೀ ದೇವರ ನಿತ್ಯ ಪೂಜೆಗೆ ಒಂದು ತಿಂಗಳ ದೀಪದ ಎಣ್ಣೆಯನ್ನು ಕೊಟ್ಟು ಸಹಕರಿಸಿದ್ದಾರೆ. ಶ್ರೀಮತಿ ಸುಜಾತ ಶೆಟ್ಟಿ ಮತ್ತು ಶ್ರೀ ಸುಕೇಶ್ ಶೆಟ್ಟಿಯವರು ಭಜನೆಗೆ ಮ್ಯಾಟ್ ನೀಡಿದ್ದಾರೆ. ಎಲ್ಲರಿಗೂ ಪ್ರಾರ್ಥನಾ ಮಂದಿರ ಸಮಿತಿಯ ಪರವಾಗಿ ಹೃತ್ಪೂರ್ವಕ ಧನ್ಯವಾದಗಳು.

**ಪ್ರಸಾದ್ ಕುಮಾರ್ ಶೆಟ್ಟಿ**
ಸಂಚಾಲಕರು, ಪ್ರಾರ್ಥನಾ ಮಂದಿರ ಸಮಿತಿ

**ಶೋಭಾ ಶೇಖ**
ಚೇರ್‌ಪರ್ಸನ್, ಪ್ರಾರ್ಥನಾ ಮಂದಿರ ಸಮಿತಿ

# ಬಂಟರ ಸಂಘ ಬೆಂಗಳೂರು
# ವಿದ್ಯಾರ್ಥಿ ವೇತನ ಮತ್ತು ಪ್ರಶಸ್ತಿ ಸಮಿತಿ 2024–26

ಬೆಂಗಳೂರು ಬಂಟರ ಸಂಘ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಆರ್ಥಿಕ ಸಹಾಯವನ್ನು ಹಲವು ವರ್ಷಗಳಿಂದ ನೀಡುತ್ತಾ ಬಂದಿದೆ. ಆರ್ಥಿಕವಾಗಿ ಸಂಕಷ್ಟದಲ್ಲಿರುವ ಅನೇಕ ವಿದ್ಯಾರ್ಥಿಗಳು ಈ ಯೋಜನೆಯ ಸದುಪಯೋಗವನ್ನು ಪಡೆದು ಸಮಾಜದ ವಿವಿಧ ಕ್ಷೇತ್ರಗಳಲ್ಲಿ ಯಶಸ್ಸು ಗಳಿಸಿ ಔದ್ಯೋಗಿಕವಾಗಿ ಮುನ್ನಡೆಯುತ್ತಿರುವುದು ಸಂಘಕ್ಕೆ ಸಾರ್ಥಕತೆಯನ್ನು ತಂದಿದೆ. ಸಂಘದ ಸಹಾಯಧನ ಹಾಗೂ ತಮ್ಮ ಶ್ರಮದಿಂದ ಔದ್ಯೋಗಿಕವಾಗಿ ಹಾಗೂ ಆರ್ಥಿಕವಾಗಿ ಸಬಲರಾಗಿರುವ ತಾವು, ಹಣವನ್ನು ಸಂಘಕ್ಕೆ ನೀಡುವುದರ ಮೂಲಕ ಸಮಾಜದ ಇನ್ನಷ್ಟು ವಿದ್ಯಾರ್ಥಿಗಳಿಗೆ ಸಹಾಯವಾಗುವಂತೆ ಮಾಡಿದ್ದೀರಿ.

ಎಪ್ರಿಲ್ 1,2025 ರಿಂದ ಜನವರಿ 31, 2026ರವರೆಗೆ ರೂ. 15,43,598/– (ಹದಿನೈದು ಲಕ್ಷದ ನಲವತ್ತ ಮೂರು ಸಾವಿರದ ಐನೂರ ತೊಂಭತ್ತ ಎಂಟು ರೂಪಾಯಿ) ಮೊತ್ತವನ್ನು ಸಂಗ್ರಹಿಸಲಾಗಿದ್ದು, ನೀಡಿದವರ ವಿವರಗಳು ಈ ಕೆಳಗಿನಂತಿವೆ;

| | | | |
|---|---|---|---|
| ಸ್ವಾತಿ ಸಿ. ಶೆಟ್ಟಿ | ಸಂದೀಪ್ ಶೆಟ್ಟಿ | ಚೈತನ್ಯ ಶೆಟ್ಟಿ | ದರ್ಶನ್ ಶೆಟ್ಟಿ |
| ರಜತ್ ಶೆಟ್ಟಿ | ಶ್ರಾವ್ಯ ಶೆಟ್ಟಿ | ರಂಜಿತ್ ಶೆಟ್ಟಿ ಎನ್.ಜಿ. | ತೃಪ್ತಿ ಆರ್. ಚೌಟ |
| ಶ್ರೀನಿಧಿ ಪಿ. ಶೆಟ್ಟಿ | ಮಹೇಶ್ ಶೆಟ್ಟಿ | ಯಜ್ಞೇಶ್ ಅಡಪ | ನಿತೇಶ್ ಶೆಟ್ಟಿ |
| ಜಿ. ಸಿಂಚನ ಶೆಟ್ಟಿ | ಸಂಕೇತ್ ಶೆಟ್ಟಿ | ಸುಪ್ರೀಯ ಸಿ. ಶೆಟ್ಟಿ | ಪೃಥ್ವಿರಾಜ್ ಶೆಟ್ಟಿ ಹೆಚ್. |
| ಪವಿತ್ರ ಶೆಟ್ಟಿ | ಆದರ್ಶ್ ಶೆಟ್ಟಿ | ಮೇಘರಾಜ್ ಶೆಟ್ಟಿ | ನಿವೇದಿತಾ ರೈ ಹೆಚ್. |
| ಪಿ. ಪ್ರಖ್ಯಾತ್ ಶೆಟ್ಟಿ | ಸಮರ್ಥ್ ಶೆಟ್ಟಿ | ಡಾ. ಪ್ರದೀಪ್ ಶೆಟ್ಟಿ | ನಂದೀಶ್ ಶೆಟ್ಟಿ |
| ರೇಷ್ಮಾ ವಿ. | ಶಬರೀಶ ಶೆಟ್ಟಿ | ಅಕ್ಷಯ್ ಎಸ್. ಶೆಟ್ಟಿ | ಪ್ರವೀಣ್ ಶೆಟ್ಟಿ |
| ನಿಖಿತಾ ಎಸ್. ಶೆಟ್ಟಿ | ಐಶ್ವರ್ಯ ಶೆಟ್ಟಿ | ಭರತ್ ಶೆಟ್ಟಿ | ರುತೇಶ್ ಕುಮಾರ್ ಆರ್. |
| ಸುದರ್ಶನ್ ಆರ್. ಶೆಟ್ಟಿ | ವಿಕಾಸ್ ವಿ. ಶೆಟ್ಟಿ | ಸುದರ್ಶನ್ ಶೆಟ್ಟಿ | ನಿರೀಕ್ಷಿತ್ ಶೆಟ್ಟಿ |
| ಅರುಣ್ ಶೆಟ್ಟಿ | ನಿಷ್ಮಿತಾ ಶೆಟ್ಟಿ ಜಿ.ಪಿ | ಸೃಜನ್ ಕೆ.ಬಿ | ತೇಜಶ್ರೀ ಪುತ್ತೂರು |
| ಶಯನ್ ಶೆಟ್ಟಿ | ರಚಿತ್ ಕುಮಾರ್ ಹೆಗ್ಡೆ | ಮೇಘನಾ ಜೆ. ಶೆಟ್ಟಿ | ಪವಿತ್ರ ಶೆಟ್ಟಿ |
| ಆಕಾಶ್ ಶೆಟ್ಟಿ | ಸ್ಫೂರ್ತಿ ಶೆಟ್ಟಿ | ದಿವ್ಯಾ ಡಿ. ಶೆಟ್ಟಿ | |

ನಮ್ಮ ಸಂಘದ ವಿದ್ಯಾನಿಧಿಗೆ ಧನ ಸಹಾಯ ಮಾಡುವವರು ಸಂಘದ ಕಛೇರಿಯನ್ನು ಸಂಪರ್ಕಿಸಲು ಕೋರಲಾಗಿದೆ. (080–23399323/23399636 / 7022119739)

ಸಂಘದ ಅಧಿದೇವತೆ ಶ್ರೀ ವರಸಿದ್ಧಿ ವಿನಾಯಕನು ತಮಗೆ ಹಾಗೂ ತಮ್ಮ ಕುಟುಂಬಕ್ಕೆ ಆಯುರಾರೋಗ್ಯ ಭಾಗ್ಯವನ್ನು ನೀಡಿ ಇನ್ನಷ್ಟು ನಮ್ಮ ಸಮಾಜದ ವಿದ್ಯಾರ್ಥಿಗಳಿಗೆ ವಿದ್ಯಾನಿಧಿ ನೀಡುವ ಶಕ್ತಿಯನ್ನು ನೀಡಲೆಂದು ಪ್ರಾರ್ಥಿಸುತ್ತಿದ್ದೇವೆ.

**ಸುಧಾಕರ ಶೆಟ್ಟಿ ಹಟ್ಟಿಯಂಗಡಿ**
ಸಂಚಾಲಕರು
ವಿದ್ಯಾರ್ಥಿವೇತನ ಮತ್ತು ಪ್ರಶಸ್ತಿ ಸಮಿತಿ
ಮೊ.: 94490 89993

**ಉಮೇಶ್ ಕುಮಾರ್ ಶೆಟ್ಟಿ**
ಚೇರ್‌ಪರ್ಸನ್
ವಿದ್ಯಾರ್ಥಿವೇತನ ಮತ್ತು ಪ್ರಶಸ್ತಿ ಸಮಿತಿ
ಮೊ.: 97412 20559

## Congratulations


**Vrishika P Shetty**

Ms. Vrishika P Shetty Daughter of Prabhakar Shetty and Bina Shetty has cleared her CA Finals in the January 2026 attempt. Bunts Sangha congratulates her on this achievement and wishes her all the best for the future.

ಬಂಟರ ಸಂಘ ಬೆಂಗಳೂರು
BUNTS' SANGHA BANGALORE

**No. 324, Chord Road, Vijayanagar, Bengaluru - 560040 | Tel.: 080-23399636 / 23399323**
**Email: buntsanghabangalore@yahoo.in | info@buntsanghablr.com | Website: www.buntsanghablr.com**

# 'ಸಂಕಲ್ಪ'
# "ಶಿಕ್ಷಣದಿಂದ ಸಂಪನ್ನತೆ...... ಇದೇ ನಮ್ಮ ಸಂಕಲ್ಪ"

ಬೆಂಗಳೂರು ಬಂಟರ ಸಂಘವು ಗ್ರಾಮೀಣ ಪ್ರದೇಶದ ಪ್ರತಿಭಾನ್ವಿತ ವಿದ್ಯಾರ್ಥಿಗಳನ್ನು ಗುರುತಿಸಿ ಎರಡು ವರ್ಷದ ಉಚಿತ ಪಿಯುಸಿ ಶಿಕ್ಷಣವನ್ನು ನೀಡುವ ಯೋಜನೆಯೇ ಸಂಕಲ್ಪ.

ಆರ್ಥಿಕವಾಗಿ ಸಂಕಷ್ಟದಲ್ಲಿರುವ ಪ್ರತಿಭಾನ್ವಿತ ಬಂಟ ವಿದ್ಯಾರ್ಥಿಗಳಿಗೆ ಬಂಟರ ಸಂಘ ಬೆಂಗಳೂರು ಆರ್.ಎನ್.ಎಸ್. ವಿದ್ಯಾನಿಕೇತನ-II ಸಂಸ್ಥೆಯಲ್ಲಿ ಉಚಿತ ಪಿಯುಸಿ ಶಿಕ್ಷಣ (ಸೈನ್ಸ್ ಮತ್ತು ಕಾಮರ್ಸ್) ಹಾಗೂ ವಸತಿ ಸೌಲಭ್ಯ ಪಡೆಯಲು ಸುವರ್ಣಾವಕಾಶ.

ನಮ್ಮ ಹಿರಿಯರು ಹಾಕಿಕೊಟ್ಟ ಚಾರಿಟೇಬಲ್ ನೆಲೆಯಲ್ಲಿ ಬಂಟರ ಸಂಘ ಬೆಂಗಳೂರು ಕಳೆದ 68 ವರ್ಷಗಳಲ್ಲಿ ನಡೆದು ಬಂದ ದಾರಿಯನ್ನು ವಿಶ್ಲೇಷಿಸಿದಾಗ, ಸಾವಿರಾರು ವಿದ್ಯಾರ್ಥಿಗಳಿಗೆ ಉಚಿತ ವಿದ್ಯಾದಾನ ನೀಡಿ ಸಮಾಜದ ಮಕ್ಕಳು ಮುಂಚೂಣಿಯಲ್ಲಿ ಬರುವಂತೆ ನಿರಂತರ ಪ್ರಯತ್ನ ನಡೆದಿದೆ. ಹೊಸತನದ ಹುಡುಕಾಟದಲ್ಲಿ ಬಂಟರ ಸಂಘ ಆರ್.ಎನ್. ಎಸ್. ವಿದ್ಯಾನಿಕೇತನ–II 9 ಎಕ್ರೆಗಳಿಗೂ ಮೀರಿದ ಸಂಕೀರ್ಣ. ನಗರದ ಜಂಜಾಟದಿಂದ ಹೊರಗಿರುವ ಪ್ರಕೃತಿಯ ಶಾಂತ ವಾತಾವರಣದಲ್ಲಿ ವಿದ್ಯಾರ್ಜನೆಗೆ ಹೇಳಿ ಮಾಡಿಸಿದ ತಾಣ. ಈಗಾಗಲೇ 5 ವರ್ಷದಲ್ಲಿ ಸಂಕಲ್ಪದಿಂದ 350ಕ್ಕೂ ಮಿಕ್ಕಿದ ಗ್ರಾಮೀಣ ಪ್ರತಿಭಾನ್ವಿತ ವಿದ್ಯಾರ್ಥಿಗಳು ಇಲ್ಲಿನ ಪ್ರಯೋಜನ ಪಡೆದು ಮುನ್ನಡೆ ಸಾಧಿಸಿದ್ದಾರೆ.

ಪ್ರಸಕ್ತ ಸಾಲಿನಲ್ಲಿ 2026–27ರಲ್ಲಿ ಆಯ್ಕೆ ಪ್ರಕ್ರಿಯೆ ಹಲವು ನಿಬಂಧನೆಗಳೊಂದಿಗೆ ಕಾರ್ಯಗತವಾಗಲಿದೆ. 10ನೇ ತರಗತಿಯಲ್ಲಿ ಉನ್ನತ ಶ್ರೇಣಿಯಲ್ಲಿ ಉತ್ತೀರ್ಣರಾಗುವ ರಾಜ್ಯದ ವಿವಿಧ ಭಾಗಗಳಲ್ಲಿ ವಾಸಿಸುತ್ತಿರುವ ಬಂಟ ಸಮುದಾಯದ ಒಟ್ಟು 60 (ವಿಜ್ಞಾನ ವಿಭಾಗಕ್ಕೆ 40 ಹಾಗೂ ವಾಣಿಜ್ಯ ವಿಭಾಗಕ್ಕೆ 20 ವಿದ್ಯಾರ್ಥಿಗಳು) ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಬಂಟರ ಸಂಘ ಆರ್.ಎನ್.ಎಸ್. ವಿದ್ಯಾನಿಕೇತನ–II ಸಂಸ್ಥೆಯಲ್ಲಿ ಉಚಿತ ಪಿಯುಸಿ ಶಿಕ್ಷಣವನ್ನು **'ಸಂಕಲ್ಪ'** ಯೋಜನೆಯಡಿಯಲ್ಲಿ ನೀಡಲು ತೀರ್ಮಾನಿಸಲಾಗಿದೆ.

**ಅರ್ಜಿ ಸಲ್ಲಿಸಲು ನಿಯಮ/ ಮಾನದಂಡಗಳು:**

- 2025–26 ನೇ ಸಾಲಿನಲ್ಲಿ 10ನೇ ತರಗತಿ ಶಿಕ್ಷಣ ಪೂರೈಸಿದ, ರಾಜ್ಯದ ವಿವಿಧ ಭಾಗಗಳಲ್ಲಿ ವಾಸಿಸುತ್ತಿರುವ ಆರ್ಥಿಕವಾಗಿ ಸಂಕಷ್ಟದಲ್ಲಿರುವ ಪ್ರತಿಭಾವಂತ ಅಭ್ಯರ್ಥಿಗಳು (ಸಂಘದ ಸದಸ್ಯರು ಹಾಗೂ ಸದಸ್ಯೇತರರು) ಅರ್ಜಿ ಸಲ್ಲಿಸಬಹುದಾಗಿದೆ. ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ **10.04.2026.**
- ಪ್ರವೇಶ ಪರೀಕ್ಷೆಗಳು ದಿನಾಂಕ **26.04.2026,** ಭಾನುವಾರ ಬೆಳಿಗ್ಗೆ 9.30ಕ್ಕೆ ಬಂಟ್ವಾಳ, ಪುತ್ತೂರು, ಬ್ರಹ್ಮಾವರ, ಬೈಂದೂರು, ತೀರ್ಥಹಳ್ಳಿ, ಬೆಳ್ತಂಗಡಿ, ಕುಂದಾಪುರ ಮತ್ತು ಕಾರ್ಕಳದಲ್ಲಿ ಸ್ಥಳೀಯ ಬಂಟರ ಸಂಘಗಳ ಸಹಯೋಗದೊಂದಿಗೆ ಹಾಗೂ ಬೆಂಗಳೂರಿನ ಬಂಟರ ಸಂಘ ಆರ್.ಎನ್.ಎಸ್. ವಿದ್ಯಾನಿಕೇತನ ವಿಜಯನಗರ, ಬೆಂಗಳೂರು–560040 ನಲ್ಲಿ ಏಕಕಾಲದಲ್ಲಿ ನಡೆಯುತ್ತದೆ.
- ಪ್ರವೇಶ ಪರೀಕ್ಷೆಯಲ್ಲಿ ಪ್ರಥಮ ಹಂತದಲ್ಲಿ ಆಯ್ಕೆಯಾದ ಅಭ್ಯರ್ಥಿಗಳ ಮನೆಗೆ ಭೇಟಿ ನೀಡಿ ಕೌಟುಂಬಿಕ ಹಿನ್ನೆಲೆಯನ್ನು ಪರಿಶೀಲಿಸಿ, ನಂತರ ಅರ್ಹ ಅಭ್ಯರ್ಥಿಗಳನ್ನು ಆಯ್ಕೆ ಮಾಡಿ ಅಂತಿಮವಾಗಿ ಮೌಖಿಕ ಸಂದರ್ಶನಕ್ಕೆ ಆಯ್ಕೆ ಮಾಡಲಾಗುವುದು. ಪೋಷಕರು ಬಿ.ಪಿ.ಎಲ್. / ಅಂತ್ಯೋದಯ ಪಡಿತರ ಚೀಟಿ ಹೊಂದಿದ್ದು, ಅದರಲ್ಲಿ ಅಭ್ಯರ್ಥಿಯ ಹೆಸರು ಕಡ್ಡಾಯವಾಗಿ ಇರತಕ್ಕದ್ದು.
- 2025–26 ನೇ ಸಾಲಿನಲ್ಲಿ 10ನೇ ತರಗತಿ ಶಿಕ್ಷಣ ಪಡೆಯುತ್ತಿರುವ / ಪಡೆದ ಪೂರ್ವಸಿದ್ಧತಾ ಪರೀಕ್ಷೆಯಲ್ಲಿ ಶೇಕಡಾ 70 ಹಾಗೂ ಅದಕ್ಕಿಂತ ಮೇಲ್ಪಟ್ಟ ವಿದ್ಯಾರ್ಥಿಗಳು ಪ್ರಥಮ ಪಿಯುಸಿ ಕೋರ್ಸ್‌ಗೆ (ಸೈನ್ಸ್ ಮತ್ತು ಕಾಮರ್ಸ್) ಅರ್ಜಿ ಸಲ್ಲಿಸಬಹುದು.

- ಮುಖ್ಯೋಪಾಧ್ಯಾಯರ ಧೃಡೀಕೃತ ಸಹಿಯಿರುವ ಪೂರ್ವಸಿದ್ಧತಾ ಪರೀಕ್ಷೆಯ ಅಂಕಪಟ್ಟಿಯನ್ನು ಕಡ್ಡಾಯವಾಗಿ ಲಗತ್ತಿಸತಕ್ಕದ್ದು.
- ಕ್ರೀಡೆ ಅಥವಾ ಇನ್ಯಾವುದೇ ಕ್ಷೇತ್ರದಲ್ಲಿ ರಾಷ್ಟ್ರ / ರಾಜ್ಯ ಮಟ್ಟದಲ್ಲಿ ಸಾಧನೆಗೈದ ವಿದ್ಯಾರ್ಥಿಗಳಿಗೆ ವಿಶೇಷ ಆದ್ಯತೆ ಕಲ್ಪಿಸಲಾಗುವುದು.
- ಅಂತಿಮವಾಗಿ ಆಯ್ಕೆಗೊಂಡ ಅಭ್ಯರ್ಥಿಗಳಿಗೆ ಬಂಟರ ಸಂಘ ಆರ್.ಎನ್.ಎಸ್. ವಿದ್ಯಾನಿಕೇತನ–II ಸಂಸ್ಥೆಯಲ್ಲಿ (ಯಲಚಗುಪ್ಪೆ ಗ್ರಾಮ, ತಾವರೆಕೆರೆ ಹೋಬಳಿ, ಬೆಂಗಳೂರು ದಕ್ಷಿಣ ತಾಲೂಕು) 2 ವರ್ಷದ ಉಚಿತ ಶಿಕ್ಷಣ, ವಸತಿಯೊಂದಿಗೆ ವಿಜ್ಞಾನ ವಿಭಾಗದ ಆಸಕ್ತ ವಿದ್ಯಾರ್ಥಿಗಳಿಗೆ ಇಂಜಿನಿಯರಿಂಗ್ ಮತ್ತು ವೈದ್ಯಕೀಯ ಮೊದಲಾದ ಕೋರ್ಸ್‌ಗೆ ಅರ್ಹತೆ ಪಡೆಯಲು ಅಗತ್ಯವಿರುವ ಸಿ.ಇ.ಟಿ. ಮತ್ತು ನೀಟ್ ಪರೀಕ್ಷೆಗಳಿಗೆ ಉಚಿತ ಕೋಚಿಂಗ್ ನೀಡಲಾಗುವುದು.
- ಆಯ್ಕೆಯಾದ ಅಭ್ಯರ್ಥಿಗಳು ಎರಡು ವರ್ಷಗಳ ಅವಧಿಯನ್ನು ಪೂರ್ತಿಗೊಳಿಸತಕ್ಕದ್ದು. ಎರಡು ವರ್ಷಗಳ ಅವಧಿಯ ಮಧ್ಯದಲ್ಲಿ (ಯಾವುದೇ ಕಾರಣಕ್ಕೂ) ಪೂರ್ತಿಗೊಳಿಸದಿದ್ದಲ್ಲಿ ಅಭ್ಯರ್ಥಿಗಳೇ ಶಾಲಾ ಶುಲ್ಕ ರೂ. 1,50,000/– ವನ್ನು ಪಾವತಿಸತಕ್ಕದ್ದು.
- ಅರ್ಹ ಅಭ್ಯರ್ಥಿಗಳು ಭರ್ತಿ ಮಾಡಿದ ಅರ್ಜಿಯನ್ನು ಸೂಕ್ತ ದಾಖಲೆಗಳೊಂದಿಗೆ (ಬಿಪಿಎಲ್ / ಅಂತ್ಯೋದಯ ಕಾರ್ಡ್, ವಿಳಾಸ ಧೃಢೀಕರಣ) ಬೆಂಗಳೂರು ಬಂಟರ ಸಂಘದ ಕಛೇರಿಗೆ ಖುದ್ದಾಗಿ / ಪೋಸ್ಟ್ ಮೂಲಕ ದಿನಾಂಕ **10.04.2026**ರ ಒಳಗಾಗಿ ಅರ್ಜಿಯನ್ನು ಸಲ್ಲಿಸಬಹುದಾಗಿದೆ.
- ಹೆಚ್ಚಿನ ಮಾಹಿತಿಗಾಗಿ ಈ ಕೆಳಗಿನ ಸಂಕಲ್ಪ ಪರೀಕ್ಷಾ ವಲಯದ ಕೊ–ಆರ್ಡಿನೇಟರ್‌ಗಳ ಮೊಬೈಲ್ ನಂಬರ್‌ನ್ನು ಸಂಪರ್ಕಿಸಬಹುದು.

| ಕ್ರ.ಸಂ. | ಪರೀಕ್ಷಾ ಕೇಂದ್ರ | ಪರೀಕ್ಷಾ ಕೇಂದ್ರದ ವಿವರ | ಕೊ–ಆರ್ಡಿನೇಟರ್‌ಗಳ ಹೆಸರು | ಮೊಬೈಲ್ ನಂಬರ್ |
|---|---|---|---|---|
| 1 | **ಬೆಂಗಳೂರು** | ಬಂಟರ ಸಂಘ ಆರ್.ಎನ್.ಎಸ್. ವಿದ್ಯಾನಿಕೇತನ–I, ವಿಜಯನಗರ, ಬೆಂಗಳೂರು–40 | ಶ್ರೀ ನಿರಂಜನ್ ಶೆಟ್ಟಿ ಕೆ<br>ಶ್ರೀ ಉಮೇಶ್ ಕುಮಾರ್ ಶೆಟ್ಟಿ<br>ಶ್ರೀಮತಿ ಹೀರಾ ಹೆಗ್ಡೆ | 96202 15965<br>97412 20559<br>96112 98055 |
| 2 | **ಬಂಟ್ವಾಳ** | ಬಂಟರ ಭವನ, ಬಂಟ್ವಾಳ | ಶ್ರೀಮತಿ ಶೋಭಾ ಶೇಖ<br>ಶ್ರೀ ಪ್ರಸಾದ್ ಕುಮಾರ್ ಶೆಟ್ಟಿ | 99018 85998<br>98457 20219 |
| 3 | **ಪುತ್ತೂರು** | ರಾಮಕೃಷ್ಣ ವಿದ್ಯಾನಿಕೇತನ ಶಾಲೆ, ಕೊಂಬೆಟ್ಟು, ಪುತ್ತೂರು | ಶ್ರೀಮತಿ ಜಯಶ್ರೀ ಸಿ. ರೈ<br>ಶ್ರೀಮತಿ ಅನುಸೂಯ ಎಲ್. ಶೆಟ್ಟಿ | 99459 99255<br>98444 30362 |
| 4 | **ಬ್ರಹ್ಮಾವರ** | ಬೋರ್ಡ್ ಹೈಸ್ಕೂಲ್, ಪೊಲೀಸ್ ಸ್ಟೇಷನ್ ಹತ್ತಿರ, ಬ್ರಹ್ಮಾವರ | ಶ್ರೀ ಅಜಿತ್ ವಿ. ಶೆಟ್ಟಿ<br>ಶ್ರೀಮತಿ ಶಕುಂತಲಾ ಶೆಟ್ಟಿ | 97233 62444<br>93431 13902 |
| 5 | **ಬೈಂದೂರು** | ಬಂಟರ ಸಂಘ, ಬೈಂದೂರು | ಶ್ರೀ ರವೀಂದ್ರ ಶೆಟ್ಟಿ<br>ಶ್ರೀ ಪ್ರತಾಪ್ ಶೆಟ್ಟಿ | 99029 90244<br>99452 38259 |
| 6 | **ತೀರ್ಥಹಳ್ಳಿ** | ಬಂಟರ ಭವನ, ಕುವೆಂಪು ರಸ್ತೆ, ತೀರ್ಥಹಳ್ಳಿ | ಶ್ರೀ ಸಂತೋಷ್ ಕುಮಾರ್ ಶೆಟ್ಟಿ ಜೆ.<br>ಶ್ರೀ ರಮೇಶ್ ಜಿ. ಶೆಟ್ಟಿ | 98458 96655<br>96116 48717 |
| 7 | **ಬೆಳ್ತಂಗಡಿ** | ಬಂಟರ ಭವನ, ಗುರುವಾಯನಕೆರೆ | ಶ್ರೀ ಉಮೇಶ್ ಪೂಂಜ ಡಿ.<br>ಶ್ರೀ ಯಶವಂತ್ | 94491 12306<br>87222 22071 |
| 8 | **ಕುಂದಾಪುರ** | ಆರ್.ಎನ್. ಶೆಟ್ಟಿ ಸಭಾಭವನ ಕುಂದಾಪುರ | ಶ್ರೀ ಅಜಿತ್ ಕುಮಾರ್ ಶೆಟ್ಟಿ ಕೆ.<br>ಶ್ರೀ ಸುನೀಲ್ ಕುಮಾರ್ ಶೆಟ್ಟಿ ಜೆ. | 96113 85957<br>98860 72580 |
| 9 | **ಕಾರ್ಕಳ** | ಬೋರ್ಡ್ ಹೈಸ್ಕೂಲು, ಕಾರ್ಕಳ (ಮಾರಿಗುಡಿ ಹತ್ತಿರ) | ಶ್ರೀ ಸಂತೋಷ್ ಕುಮಾರ್ ಶೆಟ್ಟಿ ಎಂ.<br>ಶ್ರೀ ಸುರೇಂದ್ರ ಶೆಟ್ಟಿ ಹಡಾಳಿ | 94803 33938<br>96203 86172 |

ಸಹಿ/–
**ವಿಜಯ್ ಜೆ. ಶೆಟ್ಟಿ ಹಾಲಾಡಿ**
ಗೌರವ ಕಾರ್ಯದರ್ಶಿ

ಸಹಿ/–
**ಸಿಎ. ಅಶೋಕ್ ಶೆಟ್ಟಿ ಎಂ.**
ಅಧ್ಯಕ್ಷರು

**ಆಡಳಿತ ಮಂಡಳಿ, ಪದಾಧಿಕಾರಿಗಳು ಮತ್ತು ಕಾರ್ಯಕಾರಿ ಸಮಿತಿ ಸದಸ್ಯರು, ಬಂಟರ ಸಂಘ ಬೆಂಗಳೂರು**

# ಪ್ರತಿಭಾನ್ವಿತ ವಿದ್ಯಾರ್ಥಿಗಳಿಗಾಗಿ ಉಚಿತ ಪದವಿಪೂರ್ವ ವಿದ್ಯಾಭ್ಯಾಸ ಯೋಜನೆಗೆ ಅರ್ಜಿ

**BUNTS'SANGHA BANGALORE**
**No.324, Chord Road, Vijayanagar,**
**Bengaluru – 560 040.**
**Tel.: 080-23399323 / 23399636**

| Applicant | Father | Mother |
|---|---|---|

To,
The Hon. Secretary
Bunt's Sangha Bengaluru

